ಅಧ್ಯಕ್ಷರು : ನಿಮ್ಮದು 69 ರೂಲ್‌ನಲ್ಲಿ ಇಲ್ಲ. ನಿಮ್ಮದು ಅರ್ಧಗಂಟೆ ಚರ್ಚೆಯಲ್ಲಿ ಬರುತ್ತದೆ. ಆಮೇಲೆ ತೆಗೆದುಕೊಳ್ಳುತ್ತೇನೆ. ಮುಖ್ಯಮಂತ್ರಿಗಳ ಉತ್ತರವಾಗಲಿ, ಉತ್ತರವಾದ ಮೇಲೆ ಇವತ್ತು ಯಾರ್ಯಾರು ಮೆಂಬರ್ಸ್ ನೋಟೀಸ್‌ಗಳನ್ನು ಕೊಟ್ಟಿದ್ದೀರಿ, ಯಾವ ವಿಚಾರಗಳು ಪ್ರಸ್ತಾಪವಾಗುವುದಕ್ಕೆ ಅವಕಾಶ ಇಲ್ಲ, ಅವೆಲ್ಲವನ್ನೂ ಪೂರ್ಣಮಾಡಿ ಕಳುಹಿಸಿಕೊಡುತ್ತೇನೆ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಪ್ರಾರಂಭಿಸುತ್ತಿದ್ದಾರೆ.

2. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳಿಂದ ಉತ್ತರ.

+ **ಶ್ರೀ ಜೆ. ಹೆಚ್. ಪಟೇಲ್** (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ಮುಖಂಡರು ಅವರದೇ ಆದ ವ್ಯಾಖ್ಯಾನವನ್ನು ಮಾಡಿದ್ದಾರೆ. ಇದು ಚುನಾವಣಾ ಭಾಷಣ ಎಂದು ಕೆಲವರು ಹೇಳಿದರು, ಸರ್ಕಾರ ಯಥಾಪ್ರಕಾರ ವರ್ಷ ಏನು ಹೇಳುತ್ತದೋ ಸುಮ್ಮನೆ ಅವರು ಓದಿ ಹೋಗಿಬಿಟ್ಟರು ಎಂದು. ಈ ಬ್ರಿಟಿಷ್ ಪಾರ್ಲಿಮೆಂಟರಿ ಸಿಸ್ಟಂನ್ನು ನಾವು ಅಡಾಫ್ಟ್ ಮಾಡಿಕೊಂಡಿದ್ದೇವೆ. ಆ ಪ್ರಕಾರ ನಡೆದುಕೊಂಡು ಹೋಗುತ್ತೇವೆ. ಇನ್ನು ಎಲ್ಲಿಯವರೆಗೂ ಅಲ್ಲಿ ಪ್ರೆಸಿಡೆಂಟ್ ಅಡ್ರೆಸ್ ಮಾಡುವುದಾಗಲಿ, ರಾಜ್ಯಪಾಲರು ಅಡ್ರೆಸ್ ಮಾಡುವುದಾಗಲಿ ಬದಲಾವಣೆ ಆಗಿಲ್ಲ. ರಾಜ್ಯಪಾಲರೇನು ಅವರಿಗಷ್ಟೇ ಅವರೇ ಕುಳಿತುಕೊಂಡು ಬರೆಯುತ್ತಾರೆಯೇ ? ರಾಜ್ಯಪಾಲರಿಗೆ ಏನೇನು ಸರ್ಕಾರ ಮಾಡಿದೆ, ಮಾಡಬೇಕು ಎಂದು ವಿಚಾರ ಇದೆ ಎನ್ನುವುದನ್ನು ನಾವು ಹೇಳಿದ್ದನ್ನು ಅವರು ಓದುತ್ತಾರೆ. ರಾಜ್ಯಪಾಲರ ಭಾಷಣ ಒಂದು ವಿಚಾರ. ನಮ್ಮ ಬಜೆಟ್ ಇದೆಯಲ್ಲಾ, ಅದು ಆಚಾರ. That is the spirit of what the Government is going to do. ಅದನ್ನೇ ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತೇವೆ. ಹೇಳುವಾಗ ನಾವು ಯಾವುದನ್ನು ಮಾಡಿದ್ದೇವೆ ಯಾವುದನ್ನು ಮಾಡಬೇಕು ಎಂದು ಇದ್ದೇವೆ, ಅದನ್ನು ಹಲವಾರು ಇಲಾಖೆಗಳ ಮೂಲಕ ಹೇಳುತ್ತೇವೆ. Governor's Address is idea. Budget is concrete.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದಂತೆ ಅದು ಆಚಾರ, ಅದು ವಿಚಾರ ನಿಮ್ಮದು ಪ್ರಚಾರ.

ಶ್ರೀ ಜೆ. ಹೆಚ್. ಪಟೇಲ್ : ರಾಜಕಾರಣದಲ್ಲಿರುವುದೇ ಅದಕ್ಕೋಸ್ಕರ. ಅದೇನೇ ಇರಲಿ. ರಾಜ್ಯಪಾಲರ ಭಾಷಣದಲ್ಲಿ ಕೆಲವು ಟೀಕೆಗಳು ಬಂದಿವೆ. ಕೆಲವು ಅಪ್ರಿಸಿಯೇಷನ್ ಬಂದಿದೆ. ನಾನು ಇಲ್ಲಿ ಪ್ರಾರಂಭ ಮಾಡುವುದು ನಮ್ಮ ಸರ್ಕಾರ ಬಂದ ಮೇಲೆ ಏನು ಇನಿಸಿಯೇಷನನ್ನು ನಾವು ತೆಗೆದುಕೊಂಡಿದ್ದೇವೆ, ಕೃಷ್ಣಾ ನದಿ ನೀರಿನ ಪೂರ್ಣ ಪಾಲನ್ನು ಬಳಸಿಕೊಳ್ಳುವುದಕ್ಕೆ ಕರ್ನಾಟಕ ರಾಜ್ಯಕ್ಕೆ ಇರುವ ಸಂದರ್ಭದಲ್ಲಿ ಸಾಧ್ಯವಿಲ್ಲ ಎಂದು ಹೇಳಿದ್ದರು. ಎರಡು ಸಾವಿರ ಇಸವಿಯೊಳಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಏನು ಹೇಳಿದ್ದರು, ಆ ಸಂಶಯವನ್ನು ನಿವಾರಣೆ ಮಾಡಿದ್ದೇವೆ. ನಾವು ಇವತ್ತು ಕೋರ್ಟಿನ ತೀರ್ಪಿನ ನಿರೀಕ್ಷೆಯಲ್ಲಿದ್ದೇವೆ. ಅದಾದ ತಕ್ಷಣ

ನಮ್ಮ ಪಾಲನ್ನು ನಾವು ಬಳಸಿಕೊಳ್ಳುವುದಕ್ಕೆ ಸಮರ್ಥರಿದ್ದೇವೆ. ಆಮೇಲೆ ಕಾವೇರಿ ನದಿ ಸುಮಾರು ಒಂದು ಶತಮಾನದ ಸಮಸ್ಯೆಯಾಗಿತ್ತು. ಈಗ ಕಾವೇರಿ ಪ್ರಾಧಿಕಾರವನ್ನು ಒಪ್ಪಿಕೊಂಡು ಅದರ ಬಗ್ಗೆ ಇದ್ದಂಥ ಎರಡು ರಾಜ್ಯಗಳ ಮಧ್ಯೆ ಇದ್ದ ವೈಷಮ್ಯ ಅದೂ ಇಲ್ಲದೆ ಇವತ್ತು ಒಂದು ಸೌಹಾರ್ದತೆಯಿಂದ, ಸಹಕಾರದಿಂದ ಪ್ರಧಾನಮಂತ್ರಿಗಳೇ ಅದಕ್ಕೆ ಅಧ್ಯಕ್ಷರಾಗಿರುವ ಒಂದು ಪ್ರಾಧಿಕಾರವನ್ನು ಮಾಡಿದ್ದೇವೆ. ಇದು ಬಹಳ ಹಿಂದೆ ಮಾಡಬೇಕಾಗಿತ್ತು. ಇದನ್ನು ನಮ್ಮ ಕಾಲದಲ್ಲಿ ಮಾಡಿದೆವು. ಅದನ್ನು ಪ್ರಧಾನ ಮಂತ್ರಿಗಳೂ ಮೆಚ್ಚುತ್ತಾರೆ. ತಮಿಳುನಾಡಿನವರು ಮೆಚ್ಚುತ್ತಾರೆ. ನಾವೂ ಕೂಡ ಮೆಚ್ಚುತ್ತೇವೆ. ಇದು ಕಾವೇರಿ ನದಿಯದು. ಬೆಂಗಳೂರು ಸುತ್ತ ಸುಮಾರು 10-15 ವರ್ಷಗಳಿಂದ ಈ ಔಟರ್‌ರಿಂಗ್ ರೋಡು, ಇನ್ನರ್‌ರಿಂಗ್ ರೋಡ್, ಬೈಪಾಸಸ್, ಫ್ಲೈಓವರ್ ಇವೆಲ್ಲಾ ಬರೀ ಐಡಿಯಾಗಳು ಇದ್ದವು ಅಷ್ಟೆ. ಈಗ ನಾವೆಲ್ಲಾ ಕೆಲಸ ಪ್ರಾರಂಭಮಾಡಿದ್ದೇವೆ. ಇನ್ನು ಕೆಲವು ಔಟರ್‌ರಿಂಗ್ ರೋಡು ಇನ್ನು ಕೆಲವೇ ಕೆಲವು ಮೀಟರ್ ಕೆಲಸ ಇದೆ. ಅದು ಮುಗಿದ ತಕ್ಷಣ ಟ್ರಾಫಿಕ್ ನಗರದಲ್ಲೇನು ಇವತ್ತು ಅಷ್ಟೊಂದು ಟ್ರಾಫಿಕ್ ಜಾಮ್ ಇದೆ. ಅದು ಕಡಿಮೆಯಾಗುತ್ತದೆ. This is our initiative which we have taken. ಆಮೇಲೆ ರಾಯಚೂರು ಥರ್ಮಲ್ ಪ್ಲಾಂಟ್ ಅದು ನಮ್ಮ ರಾಷ್ಟ್ರದಲ್ಲಿಯೇ ಒಂದು ಇತಿಹಾಸ ನಿರ್ಮಾಣ ಮಾಡಿದೆ. 5 ಮತ್ತು 6ನೇ ಘಟಕ ಅದನ್ನು ನಾನೇ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ, ನಾನು ಉಪಮುಖ್ಯಮಂತ್ರಿಯಾಗಿದ್ದಾಗ ನಾನೇ ಪ್ರಾರಂಭಮಾಡಿ ಈಗ ನಾನೇ ಕಮಿಷನ್ ಮಾಡುತ್ತಿದ್ದೇನೆ. This is a record time achievement. ಸಾಮಾನ್ಯವಾಗಿ ಇವೆಲ್ಲಾ ನಾಲ್ಕುವರೆ-ಐದು ವರ್ಷ ತೆಗೆದುಕೊಳ್ಳುತ್ತಿದ್ದುದು ಬರೀ ಎರಡುಕಾಲು ವರ್ಷಗಳಲ್ಲಿ ಮಾಡಿದ್ದೇವೆ. ಈ ವರ್ಷವೇ 600 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಅಡಿಷನಲ್ ಆಗಿ ಗ್ರಿಡ್‌ಗೆ ಸೇರಿಸುತ್ತಿದ್ದೇವೆ. ಕಾದ್ರಾ ಮತ್ತು ಕೊಡಸಳ್ಳಿ, ಗೇರುಸೊಪ್ಪ ಈ ಯೋಜನೆಗಳನ್ನು ಕೈಬಿಟ್ಟಿದ್ದರು. ಏನು ಅಲ್ಲಿ ಮೂರು ಕಾಸಿನ ಕೆಲಸ ಆಗಿರಲಿಲ್ಲ. ಈಗ ಮೂರು-ಮೂರು ಯೂನಿಟ್‌ಗಳನ್ನು ನಾವು ಇವತ್ತು ಕಮಿಷನ್ ಮಾಡಿದ್ದೇವೆ. ಕಾದ್ರಾ, ಕೊಡಸಳ್ಳಿ, ಗೇರುಸೊಪ್ಪ ಸ್ವಲ್ಪ ಡಿಲೇ ಆಗಿದೆ. ಕಾದ್ರಾ ಅಂಡ್ ಕೊಡಸಳ್ಳಿ We have completed our job. ಕೆಇಬಿ ದು 4 ವರ್ಷದಲ್ಲಿ 1990 ರಿಂದ 95ರವರೆಗೆ 4 ವರ್ಷದಲ್ಲಿ ಎಷ್ಟು ಟ್ರಾನ್ಸ್‌ಮಿಷನ್ ಲೈನ್ ಹಾಕಿದ್ದರು. ಎಷ್ಟು ಸಬ್‌ಸ್ಟೇಷನ್ಸ್ ಹಾಕಿದ್ದರು. ನಾವು ಈ 4 ವರ್ಷದಲ್ಲಿ ಎಷ್ಟು ಹಾಕಿದ್ದೇವೆ, ಅದರ ಕಂಪ್ಯಾರಿಟೀವ್ ಕೊಡುತ್ತೇನೆ.

12.20 ಪಿ.ಎಂ.

1989 ರಿಂದ 1994 ರವರೆಗೆ 87 ಸಬ್ ಸ್ಟೇಷನ್ ಕಟ್ಟಿದ್ದರು. 1994 ರಿಂದ 1999ರ ವರೆಗೆ 202 ಸಬ್‌ಸ್ಟೇಷನ್ ಆಗಿದೆ. ಇನ್ನು ಉಳಿದಿದ್ದು ಕಿಲೋ ಮೀಟರ್. ಎಷ್ಟು ದೂರ ಲೈನ್ ಹಾಕಿದ್ದರು ಎಂಬ ವಿಚಾರ. 1989 ರಿಂದ 1994 ರವರೆಗೆ 2184 ಕಿಲೋ ಮೀಟರ್. 1994 ರಿಂದ 1999 ರವರೆಗೆ 5,000 ಕಿಲೋ ಮೀಟರ್. ಇವೆಲ್ಲಾ ಅಚೀವ್‌ಮೆಂಟ್ಸ್ ಅಲ್ಲವಾ? ಈ ಸರ್ಕಾರ ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ನೋಡಿ, ನಿಮಗೆ ಕಣ್ಣು ಇದ್ದರೆ ನಾನು ಕಾಣುತ್ತೇನೆ. ನೀವು ಕಣ್ಣು ಮುಚ್ಚಿಕೊಂಡರೆ ನಾನು ಮಾಯ ಆಗಿ ಬಿಡುತ್ತೇನಾ ? ನೀವು ಕಾಣದೇ ಇರಬಹುದು, ನಿಮಗೆ ನಾನು

ಕಾಣದೇ ಇರಬಹುದು. ನಾನಂತೂ ಎಲ್ಲೂ ಹೋಗುವುದಿಲ್ಲ. ಹಾಗೆ ಆ ಜನ ಕಣ್ಣು ಮುಚ್ಚಿಕೊಂಡಿದ್ದಾರೆ. ಸರ್ಕಾರ ಕಾಣುವುದಿಲ್ಲ. ಏನೂ ಪ್ರಗತಿ ಆಗಿಲ್ಲ, ದಿವಾಳಿ ಆಗಿದೆ, ಹಾಗೆ ಹೀಗೆ ಎಂದು ಹೇಳುತ್ತಾರೆ. ನೀವು ಟೀಕೆ ಮಾಡುವುದಕ್ಕೆ ನಾವು ಬೇಡ ಎನ್ನುವುದಿಲ್ಲ, ನೀವು ಬುದ್ಧಿ ಹೇಳುವುದಕ್ಕೆ ನಾವು ಬೇಡ ಎನ್ನುವುದಿಲ್ಲ. ದಾರಿ ತಪ್ಪಿದರೆ ಸರಿಪಡಿಸಿರಿ. ಕಣ್ಣಿಗೆ ಕಂಡಿದ್ದು ಕಾಣುವುದಿಲ್ಲ ಎಂದರೆ ನಾವು ಏನು ಹೇಳುವುದು ? ಯಾವ ಡಾಕ್ಟರ್ ಹತ್ತಿರ ಇವರನ್ನು ಕರೆದುಕೊಂಡು ಹೋಗುವುದು?ಸಮಾಜ ಕಲ್ಯಾಣ ವಿಚಾರ. ಸಮಾಜ ಕಲ್ಯಾಣ ಇಲಾಖೆಯಲ್ಲಿ ನಮ್ಮ ಅಚೀವ್‌ಮೆಂಟ್ ಬಗ್ಗೆ ಯಾರಾದರೂ ಬೇಕಾದರೆ ನೋಡಬೇಕು ಎಂದು ಇಚ್ಛೆ ಇದ್ದರೆ ನಾವು ಎಷ್ಟು ಗಂಗಾ ಕಲ್ಯಾಣ ಯೋಜನೆಗಳಿಗೆ ಎಲೆಕ್ಟ್ರಿಸಿಟಿ ಕೊಟ್ಟಿದ್ದೇವೆ, ಎಷ್ಟು ಹೊಸ ಬೋರ್‌ವೆಲ್ಸ್ ಕೊಟ್ಟಿದ್ದೇವೆಂದು ನೋಡಬೇಕು. 9500 ಬೋರ್‌ವೆಲ್‌ಗಳಿಗೆ ವಿದ್ಯುಚ್ಛಕ್ತಿ ಕೊಡಲಾಗಿದೆ. ಹಾಗೆಯೇ ಹಾಸ್ಪಿಟಲ್ಸ್ ವಿಚಾರ, ಸುಮಾರು 260 ಆಸ್ಪತ್ರೆಗಳನ್ನು ನಾವು ಅಪ್‌ಗ್ರೇಡ್ ಮಾಡಿದ್ದೇವೆ. 1,600 ಡಾಕ್ಟರ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. 2,000 ಡಾಕ್ಟರ್ಸ್ ಮತ್ತು ಪ್ಯಾರಾ ಮೆಡಿಕಲ್ ಡಾಕ್ಟರ್ಸ್‌ನ್ನು ನೇಮಕ ಮಾಡಿದ್ದೇವೆ. ಇವೆಲ್ಲಾ ಜನರ ಯೋಗಕ್ಷೇಮಕ್ಕೆ ಹಳ್ಳಿಗಾಡಿನ ಜನರಿಗೆ ಸವಲತ್ತು ಕೊಡಲಿಕ್ಕೆ ಮಾಡಿದ್ದೇವೆ. ಶಿಕ್ಷಣದ ವಿಚಾರ, ಸುಮಾರು ಒಂದು ಲಕ್ಷ ಶಿಕ್ಷಕರನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಇದರ ಅರ್ಥ ಏನೆಂದರೆ ಮಾನ್ಯ ಈಶ್ವರಪ್ಪನವರೆ, ಒಂದು ಲಕ್ಷ ಜನ ಶಿಕ್ಷಕರ ಅಭಾವ ಇತ್ತು ಈ ಮಹಾನುಭಾವರ ಕಾಲದಲ್ಲಿ. ನಾವೀಗ ಅದರ ವಿಚಾರ ಮಾಡಿದ್ದೇವೆ. ಇಷ್ಟು ವಿದ್ಯಾರ್ಥಿಗಳು ಇದ್ದರೆ ಮಾತ್ರ ಶಿಕ್ಷಕರನ್ನು ಕಳಿಸಬೇಕು ಎಂದು ಅವರೇನು ಹೇಳುತ್ತಿದ್ದರು, ಅದನ್ನು ನಾವು ಬದಲಾವಣೆ ಮಾಡಿ ಪ್ರತಿ ಗ್ರಾಮದಲ್ಲಿ 15 ಹುಡುಗರು ಇದ್ದರೂ ಚಿಂತೆ ಇಲ್ಲ, ಶಿಕ್ಷಕರನ್ನು ಕಳುಹಿಸುತ್ತಿದ್ದೇವೆ. ಪ್ರತಿ ಒಂದು ಗ್ರಾಮದಲ್ಲಿ 15 ಹುಡುಗರು ಇರಲಿ ಅಥವಾ 10 ಹುಡುಗರು ಇರಲಿ, ಒಬ್ಬ ಶಿಕ್ಷಕರು ಇರಬೇಕು ಎಂದು ಮಾಡಿದ್ದೇವೆ. ಶಿಕ್ಷಣದ ಬಗ್ಗೆ ಗ್ರಾಮೀಣ ಆರೋಗ್ಯದ ಬಗ್ಗೆ, ಶೆಡ್ಯೂಲ್ಡ್ ಕಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್ ಜನರ ಯೋಗಕ್ಷೇಮದ ಬಗ್ಗೆ ವಿಚಾರ ಮಾಡಿದ್ದೇವೆ. ನಾವೇನು ಹೊಸ ಹೊಸ ಐಡಿಯಾಸ್ ಕೊಡುತ್ತೇವೆಂದಲ್ಲ. ಅಚೀವ್‌ಮೆಂಟ್ಸ್ ಬಗ್ಗೆ ಹೇಳುತ್ತೇನೆ. ಆನಂತರ ಹೌಸಿಂಗ್ ವಿಚಾರ. ನಾವು 4 ಲಕ್ಷ ಮನೆ ಕಟ್ಟಿದ್ದೇವೆ, ನಾಲ್ಕು ವರ್ಷದಲ್ಲಿ. ಎಲ್ಲಿ ಕಟ್ಟಿದ್ದೀರಿ ಎಂದು ಕೇಳುತ್ತಾರೆ. ಈಗ ತಾವೆಲ್ಲಾ ಗೌರವಾನ್ವಿತ ಸದಸ್ಯರು. ಒಂದೊಂದು ಕ್ಷೇತ್ರದಲ್ಲಿ ಕೆಲವು ಕಡೆ ಕಡಿಮೆ ಇರಬಹುದು, ಕೆಲವು ಕಡೆ ಜಾಸ್ತಿ ಇರಬಹುದು. ಮನೆಗಳನ್ನು ಕಟ್ಟಿಲ್ಲವಾ? ಈ ನಾಲ್ಕು ವರ್ಷಗಳಲ್ಲಿ ಮನೆಗಳನ್ನೇ ಕಟ್ಟಿಲ್ಲವಾ? ನಾಲ್ಕು ಲಕ್ಷದ ಒಂದು ಸಾವಿರ ಮನೆಗಳನ್ನು ಕೊಟ್ಟಿದ್ದೇವೆ. ಅದೂ ಕಣ್ಣಿಗೆ ಕಾಣುವುದಿಲ್ಲ ಎಂದರೆ ಏನು ಮಾಡೋಣ ನಾವು ಜೇಬಿನಲ್ಲಿಟ್ಟುಕೊಂಡು ಓಡಾಡೋಣವೇ? ಅದಕ್ಕೆ ಮೊದಲನೆಯದಾಗಿ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಹಿಂದೆ ಒಂದು ಸಾರಿ ಹೇಳಿದ್ದೆ. ಇಲ್ಲಿ ಗಾಳಿ ಇದೆ, ಗಾಳಿ ಇದೆ ಎಂದರೆ ಎಲ್ಲಿ ಗಾಳಿ ತೋರಿಸು ಅಂದರೆ ಹೇಗೆ? ಗಾಳಿಯನ್ನು ಹೇಗೆ ತೋರಿಸಲಿ? ಚರ್ಮ ಇದ್ದರೆ ನಿಮಗೆ ಗಾಳಿ ಗೊತ್ತಾಗುತ್ತದೆ. ಸ್ಪರ್ಶದಿಂದ ಗಾಳಿ ಗೊತ್ತಾಗುತ್ತದೆ. ನೋಡುವುದರಿಂದ ಅಲ್ಲ. ಹಾಗೆಯೇ ಕೆಲವು ಸ್ಪರ್ಶದಿಂದ, ಗೊತ್ತಾಗುತ್ತದೆ, ಕೆಲವು ದೃಶ್ಯದಿಂದ ಗೊತ್ತಾಗುತ್ತವೆ. ಈಗ ಸಕ್ಕರೆ ಎಂದರೆ ಹೇಗೆ ಇರುತ್ತದೆ ಎಂದರೆ, ಅದನ್ನು ನಾಲಿಗೆಯ ಮೇಲೆ ಇಟ್ಟರೆ

ಸಕ್ಕರೆಯ ರುಚಿ ಗೊತ್ತಾಗುತ್ತದೆ. ಅದನ್ನು ನೋಡಿದರೆ ಗೊತ್ತಾಗುವುದಿಲ್ಲ. ಸಕ್ಕರೆ ಅಂದರೆ ಹೀಗೆ ಇರುತ್ತದೆ, ಬೆಳ್ಳಗೆ ಇರುತ್ತದೆ ಎಂದು ಹೇಳಿದರೆ ಅದರ ಸಿಹಿ ಗೊತ್ತಾಗುವುದಿಲ್ಲ. ಸಕ್ಕರೆಯ ಸಿಹಿ ಗೊತ್ತಾಗಬೇಕಾದರೆ ಅದನ್ನು ನಾಲಿಗೆಯ ಮೇಲೆಯೇ ಇಡಬೇಕು. ಬೆಂಕಿ ಸುಡುತ್ತದೆ ಎಂದು ಗೊತ್ತಾಗಬೇಕಾದರೆ ಅದನ್ನು ಮುಟ್ಟಿ ನೋಡಬೇಕು.

ಶ್ರೀ ವಾಟಾಳ್ ನಾಗರಾಜ್ : ಪ್ರಾಥಮಿಕ ಶಾಲಾ ಮಕ್ಕಳಿಗೆ ಹೇಳಿದ ಹಾಗೆ ಹೇಳಿದರೆ. ನಮಗೆ ಕಡುಬು ಎಂದರೆ ಸಿಹಿ ಇರುತ್ತದೆ, ಹೀಗೆ ಆಗಿದೆ ನಮ್ಮ ಹಣೆಬರಹ.

ಶ್ರೀ ಜೆ.ಎಚ್. ಪಟೇಲ್ : ಹಾಗೆಯೇ ಆಗಿರುವುದು.

ಶ್ರೀ ವಾಟಾಳ್ ನಾಗರಾಜ್ : ಇಷ್ಟು ತೀರ ಪ್ರಾಥಮಿಕ ಶಾಲಾ ಮಕ್ಕಳ ತರಹ ನೀವು ನಮ್ಮನ್ನು ತಿಳಿದುಕೊಂಡಿದ್ದೀರಾ?

ಶ್ರೀ ಜೆ.ಎಚ್. ಪಟೇಲ್ : ನೀವು ಪ್ರಾಥಮಿಕ ಶಾಲಾ ಮಕ್ಕಳು ಎಂದಲ್ಲ. ನಾನು ಟೀಚರ್ ಅಷ್ಟೇ. ಅದಕ್ಕೆ ಹೇಳಿದ್ದು, ಅವರವರ ಮಟ್ಟಕ್ಕೆ ಅವರು ಶಿಕ್ಷಕರು. ನಿಮ್ಮಲ್ಲಿ ಯಾರಾದರೂ ಪಿಎಚ್‌ಡಿ ಅವರು ಇದ್ದರೆ ಅವರಿಗೂ ನಾನು ಟೀಚ್ ಮಾಡುತ್ತೇನೆ, ಟೀಚ್ ಮಾಡಬಲ್ಲೆ. ರಾಜ್ಯಪಾಲರ ಭಾಷಣದ ಮೇಲೆ ಕೆಲವು ನನ್ನ ಅತ್ಯಂತ ಆತ್ಮೀಯ ಸ್ನೇಹಿತರು ಕೆಲವರು ಬಹಳ ಮರ್ಸಿಫುಲ್ ಆಗಿ ಮಾತನಾಡಿದ್ದಾರೆ. ಮಾನ್ಯ ನಂಜೇಗೌಡರು ಎಂದೂ ನನ್ನ ಬಗ್ಗೆ ಹಾಗೆ ಮಾತನಾಡುವವರೇ ಅಲ್ಲ. ಅವರು ನೀವು ಲೀಡರೇ ಅಲ್ಲ ಎಂದರಂತೆ. ಆಗಲಿ, ನಾನು ಲೀಡರ್ ಅಲ್ಲ. ಲೀಡರ್ ಎಂದರೆ ಏನು? ಈ ದೇಶಕ್ಕೆ ಗಾಂಧೀಜಿ ಅವರು ಹೋದ ನಂತರ ಮತ್ತೆ ಯಾರೂ ಲೀಡರ್ ನಮ್ಮ ದೇಶಕ್ಕೆ ಬಂದಿಲ್ಲ. ನೀವು ನೋಡಿರುವ ಲೀಡರ್‌ಗಳೂ ಲೀಡರ್ ಅಲ್ಲ. ನಾನಂತೂ ಅಲ್ಲ. ನಾನು ಇಲ್ಲಿ ಸಭಾ ನಾಯಕ, ಜನತಾದಳ ಮುಖಂಡ ಅಷ್ಟೇ. ಹೊರತು ಲೀಡರ್ ಅಲ್ಲ. ಅವರು ತಿಳಿದುಕೊಂಡಿರುವವರೂ ಲೀಡರ್ ಅಲ್ಲ. ಅವರು ಯಾರನ್ನು ಲೀಡರ್ ಎಂದು ತಿಳಿದುಕೊಳ್ಳುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಷ್ಟೆಲ್ಲಾ ಗುಟ್ಟು ಗೊತ್ತಿದೆ ಎಂದರೆ ಯಾರು ಲೀಡರ್ ಎಂದು ಹೇಳಿ ನೋಡೋಣ.

ಶ್ರೀ ಜೆ.ಎಚ್. ಪಟೇಲ್ : ನಾನು ಹೇಳಿದ್ದು ಅದಕ್ಕೇ, ಗಾಂಧೀಜಿ ಅವರು ಹೋದ ಮೇಲೆ ಈ ದೇಶಕ್ಕೆ ಲೀಡರ್ ಇಲ್ಲ. ಆ ದೃಷ್ಟಿಯಿಂದ ಹೇಳಿರಬಹುದು, ಬೇರೆ ದೃಷ್ಟಿಯಿಂದ ಅಲ್ಲ. ಅದಕ್ಕೆ ನಾನು ಇವತ್ತು ಹೇಳುತ್ತೇನೆ. ಸರ್ಕಾರದಿಂದ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ, ಆಚರಣೆ ಮಾಡಿದ್ದೇವೆ. ಇನ್ನೂ ಕೆಲವು ಮಾಡುವುದು ಇದೆ. ಅದಕ್ಕೆಲ್ಲಾ ಪ್ರೋಗ್ರಾಮ್ಸ್ ಹಾಕಿಕೊಳ್ಳುತ್ತೇವೆ. ಈಗ ಚುನಾವಣೆ ಬಂತು ಎಂದು ಹೀಗೆ ಹೇಳುತ್ತೀರಿ ಎಂದು ಹೇಳಿದಿರಿ. ಹೌದು, ಚುನಾವಣೆ ಬಂತು ಎಂತಲೇ ನಾವು ಇದನ್ನೆಲ್ಲಾ ಮಾಡಿದ್ದೇವೆಂದು ಹೇಳುವುದಿಲ್ಲ. ಸುಮ್ಮನೇ ಪ್ರಚಾರ ಅಲ್ಲ. ನಾವು ನಿಮ್ಮ ಹಾಗೆಯೇ ಸರ್ಕಾರ, ನಿಮ್ಮ ಹಾಗೆಯೇ ಪಕ್ಷ ನಡೆಸಿದವರು. ಸರ್ಕಾರ ನಡೆಸಬೇಕು ಎಂದು ಇರುವವರು ಮತ್ತೆ ಅಧಿಕಾರಕ್ಕೆ ನಾವು ಬರುವವರು. ನಾವು ಹೇಳಬಾರದಾ? ನಾವೇ ಹೇಳದಿದ್ದರೆ

ಮತ್ತೆ ನೀವೇನು ಹೇಳುತ್ತೀರಿ? ನಾವು, ಅಂದರೆ ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬರಬೇಕು. ನಾವೇ ಮತ್ತೆ ಜನರ ಕೆಲಸವನ್ನು ಮಾಡಬೇಕು ಎನ್ನುವ ಉದ್ದೇಶದಿಂದಲೇ ಇವನ್ನೆಲ್ಲಾ ಹೇಳುವುದು. ಅದರೊಳಗೇನೂ ಮುಚ್ಚುಮರೆ ಇಲ್ಲ. ಅದಕ್ಕೇ ಹೇಳಿದ್ದು, ರಾಜ್ಯಪಾಲರ ಭಾಷಣ ವಿಚಾರ ಆದರೆ ನಮ್ಮ ಬಜೆಟ್ ಆಚಾರ ಎಂದು ಹೇಳಿದ್ದು. It is an idea, it is a fact.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರಾಜ್ಯಪಾಲರ ಭಾಷಣ ಅದು ವಿಚಾರ, ಬಜೆಟ್ ನಿಮ್ಮ ಆಚಾರ. ನೀವು ಭಾಷಣ ಮಾಡುವುದು ಪ್ರಚಾರ. ಈ ಜನರಿಗೆ ಗ್ರಹಚಾರ ಬಂದಿದೆ.

ಶ್ರೀ ಜೆ.ಎಚ್. ಪಟೇಲ್ : ಅದು ನಿಮಗೆ ಬರಲಿ ಎಂತಲೇ ನಾವು ಇದನ್ನು ಮಾಡುತ್ತಿರುವುದು. ಅವರಿಗೆ ಗ್ರಹಚಾರ ಬರಲಿ ಎಂತಲೇ ನಾವು ಮಾಡುತ್ತಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗಲ್ಲ ಗ್ರಹಚಾರ, ನಿಮ್ಮಿಂದ ಜನರಿಗೆ ಗ್ರಹಚಾರ.

ಶ್ರೀ ವಾಟಾಳ್ ನಾಗರಾಜ್ : ಈಗ ನೀವಿಬ್ಬರೂ ಮಾಡುತ್ತಿರುವುದು ಅನಾಚಾರ.

ಶ್ರೀ ಜೆ.ಎಚ್. ಪಟೇಲ್ : ಈಗ ವಿಷಯ ಗೊತ್ತಾಯಿತು ತಾನೇ, ನಿಮಗೆ ಗ್ರಹಚಾರ ಬಂತು ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಜನರಿಗೆ ಗ್ರಹಚಾರ ಬಂದಿರುವುದು, ನಮಗಲ್ಲ.

ಶ್ರೀ ಜೆ.ಎಚ್. ಪಟೇಲ್ : ಬೆಂಗಳೂರು ನಗರವನ್ನು ಮೆಗಾಸಿಟಿ ಮಾಡುವ ವಿಚಾರ. ಎಲ್ಲಾ ಕಡೆ ಕೆಲಸಗಳು ನಡೆಯುತ್ತಿದೆ. ಕೆಲಸ ಮಾಡಿದ್ದನ್ನು ಹೇಳಬೇಕು.

Mr. Suresh Kumar is one of the most intelligent members of this House. ಬೆಂಗಳೂರು ಸಿಟಿ ಕೆಲಸ ಆಗುತ್ತಿಲ್ಲವಾ? ಬೆಂಗಳೂರಿನಲ್ಲಿ ನಡೆಯುತ್ತಿರುವ ಕೆಲಸದಲ್ಲಿ ದೋಷ ಇರಬಹುದು. ವಾರ್ಡ್‌ಗಳಲ್ಲಿ ಇನ್ನೂ ಸ್ವಲ್ಪ ಕಸಕಡ್ಡಿ ಬಿದ್ದಿರಬಹುದು. ಆದರೆ ಕೆಲಸ ಆಗುತ್ತಿದೆ ಇವತ್ತು ಬೆಂಗಳೂರಿನಲ್ಲಿ. ಮಾನ್ಯ ವಾಟಾಳ್ ಅವರೇ ತಾವು ನೋಡುತ್ತಿದ್ದೀರಿ ಕೆಲಸ ಆಗುತ್ತಿದೆ. ಕೆಲಸ ಆಗುತ್ತಿದೆ ಎಂದು ಎಲ್ಲಾ ಜನರು ಹೇಳುತ್ತಿದ್ದಾರೆ. ಹಳ್ಳಿಗಳಲ್ಲೂ ಸಹ ರಸ್ತೆಯ ವಿಚಾರ ಬಿಟ್ಟರೆ ಹಳ್ಳಿಗಳಲ್ಲಿ ಯಾವುದೇ ಕಡೆಗೆ ಹೋದರೂ ಸಹ ಕೆಲಸ ಆಗುತ್ತಿದೆ ಎಂದು ಒಪ್ಪಿಕೊಳ್ಳುತ್ತಾರೆ. ಇನ್ನೂ ಪೂರ್ಣ ಆಗದೇ ಇರಬಹುದು.

ಶ್ರೀ ವಾಟಾಳ್ ನಾಗರಾಜ್ : ಸತ್ಯ ಹೇಳುವುದಕ್ಕೆ ತಯಾರಾಗಿಲ್ಲ ನೋಡಿ. ನೀವು ರಸ್ತೆ ಸರಿ ಇಲ್ಲ ಎಂದು ಒಪ್ಪಿಕೊಂಡಿರಿ, ಸಂತೋಷ. ಸರಿ ಇಲ್ಲ ಎಂದು ತಾವು ಸತ್ಯ ಹೇಳುತ್ತಿದ್ದೀರಿ. ಅದನ್ನು ಹೇಳಬೇಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಜೆ.ಎಚ್. ಪಟೇಲ್ : 1991 ರಿಂದ 1995 ರ ವರೆಗೆ 13,123 ಹಾಗೂ 1995 ರಿಂದ 1999 ರವರೆಗೆ 86,900 ಸಂಖ್ಯೆಯಷ್ಟು ಪ್ರೈಮರಿ ಸ್ಕೂಲ್ ಟೀಚರ್‌ಗಳನ್ನು ನೇಮಕ ಮಾಡಲಾಗಿದೆ. ಇದು ನಮ್ಮ ಪರ್‌ಫಾರ್ಮೆನ್ಸ್. ಅನಂತರ, ಸ್ಕೂಲ್ ರೂಮ್‌ಗಳ ಬಗ್ಗೆ ಹೇಳುವುದಾದರೆ, 1991 ರಿಂದ 1995 ರವರೆಗೆ 4,700 ಹಾಗೂ 1995 ರಿಂದ 1999ರವರೆಗೆ 25,800 ಸ್ಕೂಲ್ ರೂಮ್‌ಗಳನ್ನು

ಕಟ್ಟಿದ್ದೇವೆ. ಇನ್ನು ವಿದ್ಯುಚ್ಛಕ್ತಿ ಕುರಿತು ಹೇಳುವುದಾದರೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆಯಿದ್ದು, ಈ ವರ್ಷ 600 ಮೆಗಾವ್ಯಾಟ್‌ನ್ನು ಸೇರಿಸಿದರೂ ಕೊರತೆ ಇದ್ದೇ ಇದೆ. ಏಕೆಂದರೆ, ಇನ್ನೂ ಸಿಸ್ಟಂ ಇಂಪ್ರೂವ್‌ಮೆಂಟ್ ಆಗಬೇಕಾಗಿದೆ. ಈಗ ಡಿಮ್ಯಾಂಡ್ ಎಷ್ಟು ಜಾಸ್ತಿಯಾಗಿದೆಯೆಂದರೆ, ಕಳೆದ ವರ್ಷ ಇದೇ ಸಮಯದಲ್ಲಿ ಒಂದು ದಿವಸಕ್ಕೆ 60 ರಿಂದ 65 ಮಿಲಿಯನ್ ಯೂನಿಟ್‌ಗಳಷ್ಟು ಕನ್ಸ್ಸಮ್‌ಷನ್ ಇತ್ತು. ಒಂದೆರಡು ಹೆಚ್ಚು-ಕಡಿಮೆ ಇರಬಹುದು. ಆದರೆ, ಇವೊತ್ತು ಒಂದು ದಿವಸಕ್ಕೆ 76 ರಿಂದ 77 ಮಿಲಿಯನ್ ಯೂನಿಟ್‌ಗಳಷ್ಟು ಕನ್ಸ್ಸಮ್‌ಷನ್ ಇದೆ, ಡಿಮ್ಯಾಂಡ್ ಕೂಡ ಜಾಸ್ತಿಯಾಗುತ್ತಿದೆ. ಕಾರ್ಖಾನೆಗಳ, ಪಂಪುಸೆಟ್ಟುಗಳ, ಕನ್ಸ್ಸಮ್‌ಷನ್ ಡಿಮ್ಯಾಂಡ್ ಜಾಸ್ತಿಯಾಗುತ್ತಿದೆ. ಅದಕ್ಕೆ ನಾವಿನ್ನೂ ಕೋಪ್‌ಅಪ್ ಆಗಿಲ್ಲದಿರುವುದರಿಂದ ತೊಂದರೆಯಾಗಿದೆ. ಈಗ ಅನ್‌ಶೆಡ್ಯೂಲ್ ಲೋಡ್ ಷೆಡ್ಡಿಂಗ್ ಅನಿವಾರ್ಯವಾಗಿದೆ. ಆ ಸಿಸ್ಟಂ ಹಾಗೇ ಇದೆ, ತೀರಾ ಹೆಚ್ಚಾದರೂ ತಡೆದುಕೊಳ್ಳುವುದಿಲ್ಲ, ತೀರಾ ಲೋ ವೋಲ್ಟೇಜ್ ಆದರೂ ತಡೆದುಕೊಳ್ಳುವುದಿಲ್ಲ. This is how it has got to be managed. ಇನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಬಗ್ಗೆ ಹೇಳುವುದಾದರೆ, ನಾನು ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದಿಷ್ಟೆ: ಅದೊಂದು ಅತ್ಯಂತ ಉತ್ತಮವಾದ ಸಂಸ್ಥೆಯಾಗಿದ್ದು ಪಬ್ಲಿಕ್ ಸೆಕ್ಟರ್ ಪರ್‌ಫಾರ್ಮೆನ್ಸ್‌ನಲ್ಲಿ ಕೆಪಿಸಿಎಲ್ ಹ್ಯಾಸ್ ಅಚೀವ್ಡ್ ರಿಮಾರ್ಕಬಲ್. 28 ತಿಂಗಳುಗಳಲ್ಲಿ ಎರಡು ಘಟಕಗಳನ್ನು ಸ್ಥಾಪಿಸಿದ್ದಾರೆ. ಅಲ್ಲಿರುವ ಇಂಜಿನಿಯರುಗಳಾಗಲಿ, ಆಡಳಿತವಾಗಲಿ, ಯಾವುದೇ ಆಗಲಿ, ಫ್ಲಾಲೆಸ್ ರೀತಿಯಲ್ಲಿ ನಡೆಯುತ್ತಿದೆ. KEB with all these difficulties, with all these constraints, they are doing their level best to keep the people at least satisfied. It may not be possible to satisfy everybody. But, they are doing their level best. ಇನ್ನು ಮಿನಿ ಹೈಡಲ್ ಪ್ರಾಜೆಕ್ಟ್‌ಗಳು, ನಾನ್-ಕನ್‌ವೆನ್‌ಷನಲ್ ಎನರ್ಜಿಯಲ್ಲಿ ಗಣನೀಯವಾದ ಪ್ರಗತಿಯಾಗಿಲ್ಲ. ನಾನ್-ಕನವೆನ್‌ಷನಲ್ ಎನರ್ಜಿ ಸೆಕ್ಟಾರ್‌ನಲ್ಲಿ ವಿಂಡ್ ಮಿಲ್‌ಗಳಿಂದ 15 ರಿಂದ 20 ಮೆಗಾವ್ಯಾಟ್‌ಗಳನ್ನು ಸೇರಿಸಿದ್ದು, 100 ಮೆಗಾವ್ಯಾಟ್ ಸೇರಿಸುವ ಪ್ಲಾನ್ ಇದೆ. ಇನ್ನು ಇರಿಗೇಷನ್ ಬಗ್ಗೆ ಮಾತನಾಡುತ್ತಾ ದುಡ್ಡು ಖರ್ಚು ಮಾಡಿದ್ದಾರೆ, ಫಿಸಿಕಲ್ ಟಾರ್ಗೆಟ್ ಆಗಿಲ್ಲ, ಇಲ್ಲಿ ಇಷ್ಟು ಹಣ ಸೋರಿ ಹೋಗಿದೆ, ಅಲ್ಲಿ ಅಷ್ಟು ಹಣ ಪೋಲಾಗಿದೆ ಎಂದು ಹೇಳಿದಿರಿ. ಆದರೆ, ಯಾವುದಕ್ಕೂ ಏನೊಂದು ಆಧಾರವಿಲ್ಲದಿರುವಂಥ ಊಹಾಪೋಹದ ಆಪಾದನೆಗಳಾಗಿವೆ. ಮಾಡಿರುವ ಒಂದು ಆಪಾದನೆಗಾದರೂ ಆಧಾರವಿಲ್ಲ. ನಾವು ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 7,809 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದಿರಿಸಿದ್ದು, ಇರಿಗೇಷನ್‌ಗಾಗಿ ಒಟ್ಟು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದರೆ ಅದು ಜನರ ಸಮಗ್ರ ಅಭಿವೃದ್ಧಿ ಕೆಲಸಕ್ಕಾಗಿ ತಾನೇ? ಇರಿಗೇಷನ್, ಎಲೆಕ್ಟ್ರಿಸಿಟಿ, ಎಜುಕೇಷನ್, ಹೌಸಿಂಗ್ ಇದರಲ್ಲೆಲ್ಲಾ ನಾವು ಪ್ರಗತಿ ಸಾಧಿಸಿದ್ದೇವೆ. ತಾವು ಮಾತನಾಡುತ್ತಾ ಇವರು ಸಾಲ ತೆಗೆದುಕೊಂಡು ಬಂದು ಹೋಳಿಗೆ ಉಂಡರು. ಎಂದು ಹೇಳಿದಿರಿ ಹೌದು, ಜನರಿಗೆ ಹೋಳಿಗೆ ಉಣ್ಣಿಸುವುದಕ್ಕೋಸ್ಕರವೇ ನಾವು ಸಾಲ ಮಾಡಿದೆವು. ನೀವು ಹೋಳಿಗೆಯೂ ಉಣ್ಣಿಸಲಿಲ್ಲ, ಜನರಿಗೆ ರೊಟ್ಟಿಯನ್ನೂ ಕೊಡಲಿಲ್ಲ. ಆದರೆ, ನಾವು ಸಾಲ ಮಾಡಿ ಜನರಿಗೆ ಹೋಳಿಗೆ

ಉಣ್ಣಿಸಿದ್ದೇವೆ. ಮಾಡಿರುವ ಸಾಲವನ್ನು ತೀರಿಸುತ್ತೇವೆ, ತೀರಿಸತಕ್ಕಂಥ ಶಕ್ತಿ ನಮಗೂ ಬರುತ್ತದೆ, ಎಕನಾಮಿಕ್ ಡೆವಲಪ್‌ಮೆಂಟ್ ತಾನಾಗಿ ಆಗುತ್ತದೆ. ಅದಕ್ಕೋಸ್ಕರವೇ 'ಸಾಲಮಾಡಿ ಹೋಳಿಗೆ ತಿಂದರು' ಎಂದು ಹೇಳಿರುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಸಾಲ ಮಾಡಿ ಜನರಿಗೆ ಹೋಳಿಗೆ ತಿನ್ನಿಸಿದ್ದೇವೆ. ಇನ್ನು ಕುಡಿಯುವ ನೀರಿನ ಯೋಜನೆ ಬಗ್ಗೆ ಹೇಳುವುದಾದರೆ, ಗ್ರಾಮೀಣಾಭಿವೃದ್ಧಿಯ ಸಮಗ್ರ ಗ್ರಾಮೀಣ ಯೋಜನೆಯಲ್ಲಿ 1998-99 ರಲ್ಲಿ 3,153 ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸಿ ಮುಗಿಸಿದ್ದೇವೆ. ಅದೇ ರೀತಿ ಹಿಂದಿನ ವರ್ಷಗಳಲ್ಲಿ 1997-98ರಲ್ಲಿ 6,600, 1996-97ರಲ್ಲಿ 7,500, 1995-96ರಲ್ಲಿ 7,900 ಮತ್ತು 1994 ರಲ್ಲಿ 4,500 ಕುಡಿಯುವ ನೀರಿನ ಯೋಜನೆ ಅನುಷ್ಠಾನಗೊಳಿಸಿದ್ದೇವೆ. ಇವೆಲ್ಲವೂ ಪೂರ್ತಿಗೊಂಡಿರುತ್ತವೆ. ಪ್ರತಿ ವರ್ಷವೂ ನಾವು 7,000 ಸಂಖ್ಯೆಯಲ್ಲಿ ಕುಡಿಯುವ ನೀರಿನ ಯೋಜನೆ ಹಮ್ಮಿಕೊಂಡು ಅನುಷ್ಠಾನಗೊಳಿಸಿದ್ದೇವೆ. ನನ್ನ ದೃಷ್ಟಿಯಲ್ಲಿ ಕುಡಿಯುವ ನೀರು ಹಾಗೂ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ಸ್ವಾತಂತ್ರ್ಯ ಬಂದ ಮೊದಲ ಹತ್ತು ವರ್ಷಗಳಲ್ಲಿ ಹಮ್ಮಿಕೊಳ್ಳಬೇಕಾಗಿತ್ತು. ಸ್ವಚ್ಛವಾದ ನೀರು ಕೊಟ್ಟು ಆರೋಗ್ಯ ಸುಧಾರಿಸಬೇಕು, ಉತ್ತಮ ಶಿಕ್ಷಣ ನೀಡಿದರೆ ಮನಸ್ಸಿನ ಆರೋಗ್ಯ ಸುಧಾರಿಸಬೇಕು. ಇಷ್ಟೊತ್ತು ನಾವು ಕಾಣತಕ್ಕಂಥ ಹಲವಾರು ದೃಶ್ಯಗಳು, ನಮಗೆ ಸ್ವಾತಂತ್ರ್ಯ ಬಂದ ಐವತ್ತು ವರ್ಷಗಳ ಬಳಿಕ ಹೇಗಿದ್ದೇವೆ ಎನ್ನುವುದಕ್ಕೆ ಒಬ್ಬ ಕವಿ ಹೀಗೆ ಹೇಳುತ್ತಾನೆ : ಮಂತ್ರವಾದಿಯ ಮಾತು ಕೇಳಿ ಮಗನ ಬಲಿಗೊಡುವ ತಂದೆ, ಎರಡನೆಯದೂ ಹೆಣ್ಣಾಯಿತೆಂದು ಆತ್ಮಹತ್ಯೆ ಮಾಡಿಕೊಳ್ಳುವ ತಾಯಿ, ಕರ್ತವ್ಯ ನಿರ್ವಹಿಸದೆ ದುರಾಚಾರದಲ್ಲಿ ತೊಡಗುವ ಗುರು, ಓದದೆ ಉತ್ತೀರ್ಣನಾಗಬೇಕೆಂದು ಬಯಸುವ ವಿದ್ಯಾರ್ಥಿ, ಸ್ವಾರ್ಥ ಸಾಧನೆ, ಸ್ವಜನ ಪಕ್ಷಪಾತತನದಲ್ಲಿ ಮುಳುಗಿರುವ ರಾಜಕಾರಣಿ, ದುಡಿಯದೆ ದೇಶವನ್ನು ದುಸ್ಥಿತಿಗೆ ತಳ್ಳುತ್ತಿರುವ ಪ್ರಜೆ, ಬದುಕಿನ ಮಾರ್ಗವನ್ನರಿಯದೆ ವಿಕಾರಕ್ಕೊಳಗಾಗಿರುವ ಯುವ ಪೀಳಿಗೆ ಇವರಿಂದ ತುಂಬಿದ ಈ ದೇಶದ ಉದ್ಧಾರವೆಂತಯ್ಯಾ?

ನಾವೇಕೆ ಈ ಸ್ಥಿತಿಗೆ ಬಂದೆವು? ಇದರಲ್ಲಿ ಅವರು ಹೇಳಿರುವ ಪ್ರತಿಯೊಂದು ಮಾತೂ ನಿಜ. ಕವಿ ಜನರ ಬಗ್ಗೆಯೂ ಹೇಳಿದ್ದಾನೆ, ನಾಯಕರುಗಳ ಬಗ್ಗೆ ಹೇಳಿದ್ದಾನೆ ಹಾಗೆಯೇ ಕೌಟುಂಬಿಕ ಪರಿಸ್ಥಿತಿ ಬಗ್ಗೆಯೂ ಹೇಳಿದ್ದಾನೆ. ಬರೀ ಟೀಕೆ-ಟಿಪ್ಪಣಿ ಮಾಡಿಕೊಂಡು ಅವರು ಹಾಗೆ ಹೇಳಿದರು, ನಾವು ಹೀಗೆ ಉತ್ತರ ಹೇಳಿದ್ದೇವೆಂದಲ್ಲ. ಇದನ್ನು ನಾವು ಸ್ವಲ್ಪ ಮೇಲೆ ಏರಿ ಏನು ಮಾಡಬೇಕೆಂದು ಚಿಂತಿಸಬೇಕು. ಸರ್ಕಾರದ ಪಾಲಿಸಿ ಮತ್ತು ಪ್ರೋಗ್ರಾಂ ಇದೆಯಲ್ಲ, ಪಾಲಿಸಿ ಎಂದರೇನು? ಪಾಲಿಸಿ ಈಸ್ ಎ ಲಾಂಗ್ ಟರ್ಮ್ ಪ್ರೋಗ್ರಾಂ. ಪ್ರೋಗ್ರಾಂ ಎಂದರೆ ಶಾರ್ಟ್ ಟರ್ಮ್ ಪಾಲಿಸಿ. ಪ್ರಾರಂಭದಲ್ಲಿ ನಾವು ಪಾಲಿಸಿಯನ್ನು ಸರಿಯಾಗಿ ಮಾಡಿಕೊಳ್ಳಲಿಲ್ಲ. ಮೊದಲೇ ನಾವು ಪಾಲಿಸಿಯಲ್ಲಿ ತಪ್ಪಿದ್ದರಿಂದ ನಮ್ಮ ಪ್ರೋಗ್ರಾಂಗಳೂ ಕೂಡ ತಪ್ಪಿದವು. ಹಾಗಾಗಿ, ಇವೊತ್ತು ನಮ್ಮ ಸರ್ಕಾರದ ಪಾಲಿಸಿ, ಪ್ರೈಯಾರಿಟಿಸ್ ಬಗ್ಗೆ ಆಗಲೇ ಹಣಕಾಸು ಸಚಿವರು ತಿಳಿಸಿದ್ದಾರೆ. ನಾವು ಏನು ಪ್ರೈಯಾರಿಟೀಸ್ ಮಾಡಿಕೊಂಡಿದ್ದೇವೆ, ಅದರಂತೆಯೇ ಪ್ರೋಗ್ರಾಂ ಮಾಡಿದ್ದೇವೆ. ಇನ್ನು ಹೌಸಿಂಗ್‌ನಲ್ಲಿ 1991 ರಿಂದ 1995 ರ ವರೆಗೆ 1ಲಕ್ಷದ 86 ಸಾವಿರ ಮನೆಗಳನ್ನು ಕಟ್ಟಿದ್ದೇವೆ. 1995 ರಿಂದ 1999 ರವರೆಗೆ 3 ಲಕ್ಷದ 90 ಸಾವಿರ 922 ಮನೆಗಳನ್ನು ಕಟ್ಟಿದ್ದು, ಇದಕ್ಕೆ ಇನ್ನೂ ಸೇರಿಸುವುದಿದ್ದು, ಅಂದರೆ ನಾಲ್ಕು ಲಕ್ಷ ಹತ್ತಿರವಿದೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ಹಳ್ಳಿಯ ಜನರ ಮನೆ ಅವರ ಕುಡಿಯುವ ನೀರು, ಅವರಿಗೆ ಇರುವ ಶಿಕ್ಷಣ, ನೀರಾವರಿ, ವಿದ್ಯುಚ್ಛಕ್ತಿ ಇವುಗಳ ಕಡೇನೆ ನಾವು ಗಮನ ಕೊಟ್ಟು ಹೋಳಿಗೆ ತಿನ್ನಿಸಿರುವುದು. ದುಡ್ಡು ಏತಕ್ಕೆ ಖರ್ಚಾಯಿತು ಎಂದರೆ ಇದಕ್ಕೆ ಖರ್ಚಾಯಿತು. ಏನೂ ಖರ್ಚು ಮಾಡದೇ ನಾನು ಜನರ ಉದ್ಧಾರ ಮಾಡಿದೆ ಎಂದು ಹೇಳುವುದಿಲ್ಲ. ಸಾಲ ಮಾಡಿರಬಹುದು, ಸಾಲ ಯಾರು ಮಾಡಿಲ್ಲ. ಕೇಂದ್ರದ ಹಣಕಾಸಿನ ಸಚಿವರು 8,60,000 ಕೋಟಿ ಸಾಲ ಹೇರಿದರು. 8,60,000 ಕೋಟಿ ಕೇಂದ್ರದ ಸಾಲ ಇದೆ. ಅದಕ್ಕೆ ಡೆಟ್ ಸರ್ವೀಸ್ ಒಂದು ಲಕ್ಷ ಕೋಟಿ ರೂಪಾಯಿ ಒಂದು ವರ್ಷಕ್ಕೆ. ಈ ರೀತಿ ನಾವು ಸಾಲ ಮಾಡಿದ್ದೇವೆ, ಎಲ್ಲಾ ಸರ್ಕಾರ ಮಾಡಿವೆ. ಹಣಕಾಸಿನ ಸಚಿವರು ಹೇಳಿದ ಹಾಗೆ, ಆಂಧ್ರ ನಮ್ಮ ಮೂರರಷ್ಟು ಮಾಡಿದೆ, ತಮಿಳುನಾಡು ನಮ್ಮ ಮೂರರಷ್ಟು ಸಾಲ ಮಾಡಿದೆ. ಹಾಗೆ ನೋಡಿದರೆ ಅತೀ ಕಡಿಮೆ ಸಾಲ ಮಾಡಿ ಅತೀ ಕಡಿಮೆ ಡೆಟ್ ಸರ್ವೀಸ್ ಇರತಕ್ಕಂಥಾದ್ದೆ, ನಮ್ಮ ರಾಜ್ಯ. ಇನ್ನು ಕಾವೇರಿ ಪ್ರಾಧಿಕಾರ, ಕಾವೇರಿ ಪ್ರಾಧಿಕಾರದಿಂದ ಒಂದು ರಾಜಕೀಯ ವಾತಾವರಣ ನಿರ್ಮಾಣ. ಪಕ್ಕದ ರಾಜ್ಯದವರೊಡನೆ ನಮ್ಮ ಸ್ನೇಹ ಇನ್ನು ಹೆಚ್ಚಾಗುವುದು, ಹಾಗೂ ಸಮಸ್ಯೆಗಳು ಇಲ್ಲದೆ ಇರುವುದು. ಹೌದು, ಸುಖವಾಗಿ ಅವರ ಜೊತೆ ಪ್ರೀತಿಯಿಂದ ಇಲ್ಲದೆ ಇದ್ದರೂ ಕೂಡ ದ್ವೇಷ ಮಾಡಿಕೊಳ್ಳುತ್ತಾ ಒಬ್ಬರಿಗೊಬ್ಬರು ಇರಬಾರದು. ಆ ರೀತಿಯ ಒಂದು ವಾತಾವರಣವನ್ನು ನಾವು ಬಂದ ಮೇಲೆ ನಿರ್ಮಾಣ ಮಾಡಿದ್ದೇವೆ. That is neighbourhood. ಇನ್ನು ರಾಜ್ಯದ ಒಳಗಡೆ ಲಾ ಅಂಡ್ ಆರ್ಡರ್ You ask anybody, any expert from any country. Karnataka is the best state which is administered now in law and order ಒಬ್ಬ ಮುಖ್ಯಮಂತ್ರಿಗಳ ಕಾಲದಲ್ಲಿ ಆಗಿರುವ ಟ್ರೆಂಡ್ಸ್, ಲೂಟಿಗಳು, ಕಮ್ಯೂನಲ್ ರಯಟ್ಸ್ ಅದು Almost 50 ಪರ್ಸೆಂಟ್ ಪೂರ್ಣ ನಿಂತುಹೋಗಿದೆ ಎಂದು ಹೇಳುವುದಿಲ್ಲ. ಆದರೆ ಹೊರಗಡೆಯಿಂದ ಬರತಕ್ಕಂಥ ದರೋಡೆಕೋರರು, ಟೆರರಿಸ್ಟ್ ಮೂವ್‌ಮೆಂಟ್ ಅದು ಎಲ್.ಟಿ.ಟಿ.ಇ. ಇರಬಹುದು, ಪೀಪಲ್ಸ್‌ವಾರ್ ಗ್ರೂಪ್ ಇರಬಹುದು, ಅಥವಾ ಐಎಸ್‌ಐ ಏಜೆಂಟ್ಸ್ ನಮ್ಮ ಕೋಸ್ಟಲ್ ಏರಿಯಾದಲ್ಲೆಲ್ಲಾ ಬಂದು ವಾತಾವರಣವನ್ನು ಕೆಡಿಸಿರಬಹುದು. ಆದರೆ, ಇಂಟರ್‌ನಲಿ ಎಲ್ಲೂ ನಾವು ಒಂದು ಕೋಮಿನ ವಿವಾದಕ್ಕೆ ಆಗಲಿ, ಅಥವಾ ಮೊನ್ನೆ ಜಯನಗರದಲ್ಲಿ ಒಂದು ಇನ್ಸಿಡೆಂಟ್ ಆಯಿತು, ಹುಬ್ಬಳ್ಳಿ ಈದ್ಗಾ ಮೈದಾನ ಬಗ್ಗೆ ಬಗೆಹರಿಸಿದೆವು. ಮೊನ್ನೆ ಬಕ್ರೀದ್ ಮತ್ತು ಮಹಾವೀರ್ ಜಯಂತಿ ಒಟ್ಟಿಗೆ ಬಂದಾಗ, ಆ ದೃಶ್ಯ ನೋಡುವ ಹಾಗೆ ಇತ್ತು. ಮಹಾವೀರ ಜಯಂತಿ ಆಚರಿಸತಕ್ಕಂಥ ಜೈನರ ದೊಡ್ಡ ಸಭೆಗೆ ನೂರಾರು ಜನ ಮುಸಲ್ಮಾನರು ಬಂದಿದ್ದರು. ಅಂತಹ ವಾತಾವರಣ ನಮ್ಮ ರಾಜ್ಯದಲ್ಲೇ, ಇರುವುದು, ಬೇರೆ ಕಡೆ ಇಲ್ಲ. ಇದನ್ನು ನಾವು ಹೇಳಿಕೊಳ್ಳುವುದು ಅಲ್ಲ. ಈ ದೇಶಕ್ಕೆ ಬಂದಂತಹ ವಿದೇಶಿಯರು ಈ ಮಾತನ್ನು ಹೇಳುತ್ತಾರೆ, ಹೊರರಾಜ್ಯದಿಂದ ಬಂದಂತಹ ನಮ್ಮ ಸ್ನೇಹಿತರು ಈ ಮಾತು ಹೇಳುತ್ತಾರೆ. ಎಲ್ಲೋ ಒಂದು ಕಡೆ ದುಷ್ಟ ಪೊಲೀಸ್ ಆಫೀಸರ್ಸ್ ಇರಬಹುದು, by and large our police is really doing well at the district level. ಕೆಲವು ಕಡೆ ಇದ್ದೇ ಇರುತ್ತಾರೆ ಮಿಸ್ ಸೋಷಿಯಲ್

ಎಲಿಮೆಂಟ್ಸ್ ಇದ್ದೆ ಇರುತ್ತಾರೆ. But, performance of our police is very satisfactory. ಎಲ್ಲೂ ವಿನಾಕಾರಣ ಜನರನ್ನು ಪ್ರೋಬ್ ಮಾಡಿ ಅಥವಾ ಗುಂಡು ಹಾಕಿ ಲಾಠಿ ಚಾರ್ಜ್ ಮಾಡಿರುವುದು ಇಲ್ಲ. ಎಲ್ಲೋ ಒಂದೆರಡು ಕಡೆ ಆಯಿತು. ಅನಿವಾರ್ಯವಾಗಿ ಆಯಿತು. ನಮ್ಮ ಪೊಲೀಸ್ ಆಫೀಸರ್ಸ್ ಮಾಬ್ ವಯಲೆನ್ಸ್‌ಗೆ ತುತ್ತಾದರು. ಶಿರಾದಲ್ಲಿ ಒಬ್ಬರು ಒಳ್ಳೆಯ ಆಫೀಸರ್ ಸತ್ತುಹೋದರು. ಹಾಗೆ ಆಗಿದೆ. But the maintenance of law and order is exemplary in Karnataka. ಇನ್ನು ಬಾಬಾ ಬುಡನ್‌ಗಿರಿ ವಿಚಾರ we handled it very peacefully. ಅಲ್ಲಿ ಏನು ಎಕ್ಸ್‌ಪ್ಲೋಸಿವ್ ಸಿಚ್ಯುಯೇಷನ್ ಇತ್ತು, ಆ ಸ್ಥಳ ಕೂಡ ಐತಿಹಾಸಿಕವಾದುದ್ದು. ಅಲ್ಲಿ ದತ್ತಾತ್ರೇಯ ಪೀಠ ಎಂದು ಇದೆ ಹಾಗೂ ಪೀರ್ ಸಾಹೇಬರ ದರ್ಗಾನೂ ಇದೆ. ಎಂದರೆ ಆ ರೀತಿ ಹಿಂದೂ ಮುಸಲ್ಮಾನರು ಒಟ್ಟೊಟ್ಟಿಗೆ ಹೋಗತಕ್ಕಂಥ ಯಾತ್ರಾಸ್ಥಳಗಳು ಬಹಳ ಕಡಿಮೆ. ಅವು ಇನ್ನೂ ಹೆಚ್ಚು ಆ ಎರಡು ಜನಾಂಗಗಳನ್ನು ಒಟ್ಟಿಗೆ ತರತಕ್ಕಂಥಾದ್ದು. ಅಲ್ಲಿ ಈ ಸಾರಿ ಸ್ವಲ್ಪ ಪ್ರೊವೋಕೇಷನ್ ಇತ್ತು. ಆದರೂ ಅದನ್ನು we have managed it very well ಇನ್ನು ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್‌ನಲ್ಲಿ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್‌ನವರು ನಮಗೆ ಏನು ಹೇಳುತ್ತಾರೆ. ಎಲ್ಲಾ ಕರ್ನಾಟಕದಿಂದ ದೊಡ್ಡ ದೊಡ್ಡ ಇಂಡಸ್ಟ್ರಿಗಳು ಹೋಗುತ್ತವೆ ಎಂದು ಅಪಪ್ರಚಾರ ಮಾಡುತ್ತಾರೆ. ಸಾಫ್ಟ್‌ವೇರ್ ಇಂಡಸ್ಟ್ರಿನಲ್ಲಿ We are one of the top ten in the world. ಅದರಲ್ಲಿ ಆರು ಅಮೇರಿಕಾದಲ್ಲಿ ಇದೆ, ಒಂದು ಇಸ್ರೇಲ್‌ನಲ್ಲಿ ಇದೆ, ಒಂದು ಜಪಾನ್‌ನಲ್ಲಿ ಇದೆ. ನಮ್ಮದು ಬೆಂಗಳೂರಿನಲ್ಲಿ ಇದೆ. We are one of the top ten and our software exports last year was about Rs. 2,300 crores.ಪಕ್ಕದವರು ಇನ್ನು 150-200 ಕೋಟಿಗೂ ಹೋಗಿಲ್ಲ, ಆಗಲೇ ಎಲ್ಲಾ ಬಹಳ ದೊಡ್ಡ ಇಂಡಸ್ಟ್ರಿಗಳೆಲ್ಲಾ ಆ ಕಡೆ ಹೋಗುತ್ತವೆ, ಈ ಕಡೆ ಹೋಗುತ್ತವೆ, ಎಂದು ಅಪಪ್ರಚಾರ. ಏನಾದರೂ ಮಾಡಿಕೊಳ್ಳಲಿ. But, we have to create. ನಾವು ಕೆಲವು ಸಾರಿ ಟೀಕೆ ಮಾಡಿರುವುದು ಉಂಟು. ನೀವು ದೊಡ್ಡ ದೊಡ್ಡ ಶ್ರೀಮಂತರಿಗೆ ಏಕೆ ಕನ್ಸೆಷನ್ ಕೊಡುತ್ತೀರಿ ಎಂದು. ಆ ರೀತಿ ನಾವು ಇವತ್ತು ಕೆಲವು ಸವಲತ್ತುಗಳನ್ನು ಕೊಡದೇ ಇದ್ದರೆ ಅವರು ಬೇರೆ ಕಡೆಗೆ ಹೋಗುತ್ತಾರೆ. ಈಗ ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ, ಬಹಳ ಅನ್ ಹೆಲ್ತಿ ಕಾಂಪಿಟೇಷನ್. ಅದಕ್ಕೋಸ್ಕರ ಕೇಂದ್ರ ಸರ್ಕಾರದವರು ಒಂದು ಸಲಹೆ ಮಾಡಿದ್ದಾರೆ. ಮುಖ್ಯಮಂತ್ರಿಗಳ ಒಂದು ಕಮಿಟಿ ಮಾಡಿದ್ದಾರೆ. ಈ ತರಹದ ಕಾಂಪಿಟೇಷನ್ ನಿಲ್ಲಿಸುವುದಕ್ಕೆ ಪ್ರತಿಯೊಂದು ರಾಜ್ಯದಲ್ಲಿ ಅದರದೇ ಆದಂತಹ ಕೆಲವು ರಾ-ಮೆಟಿರೀಯಲ್ಸ್ ಸಿಗುತ್ತದೆ. Availability of skilled labour, availability of technicians ಒಂದೊಂದು ರಾಜ್ಯದಲ್ಲಿ ಒಂದೊಂದು ತರಹ ಇರುತ್ತದೆ. ಅದಕ್ಕೆ ತಕ್ಕಹಾಗೆ ಇವತ್ತು ನಾವು ಪ್ರೋಗ್ರೆಸ್ ಆಗಬೇಕು. ಆ ದೃಷ್ಟಿಯಿಂದ ಕರ್ನಾಟಕದಲ್ಲಿ ಇವೊತ್ತು investment in automobiles, investment in steel, investment in food processing units, I think, investment has come only in the last two years. Volvo, Toyoto, Suzuki, Tata ಈ ನಾಲ್ಕು ಆಟೋಮೊಬೈಲ್ ಯೂನಿಟ್ಸ್ ಇದರಿಂದ ನಮ್ಮ ಹುಡುಗರಿಗೆ ಕೆಲಸ ಸಿಗುತ್ತದೆ. ಇಂಡಸ್ಟ್ರೀಯಲ್ ಡೆವಲಪ್‌ಮೆಂಟ್ ಆಗುತ್ತದೆ. ಅದಕ್ಕೋಸ್ಕರ ನಾವು ಇವತ್ತು ಅವರಿಗೆ

ಕೆಲವು ಸವಲತ್ತುಗಳನ್ನು ಕೊಡಬೇಕಾಗುತ್ತದೆ. ಕೊಟ್ಟು ಕೆಲವು ವರ್ಷಗಳವರೆಗೆ ಕೊಡಬೇಕಾಗುತ್ತದೆ. ಸತತವಾಗಿ ಕೊಟ್ಟೇ ಇರಬೇಕು ಎಂದಲ್ಲ. ಆ ರೀತಿ ಒಂದು ರೀತಿಯ, ಒಳ್ಳೆಯ ಫ್ರೆಂಡ್ಲಿ ಅಟ್‌ಮಾಸ್ಫಿಯರ್ ಅನ್ನು ಕ್ರಿಯೇಟ್ ಮಾಡಿದ್ದೇವೆ. ಅದಕ್ಕೋಸ್ಕರ ನಾವು ಈಗ ವಿದೇಶಕ್ಕೆ ಹೋಗಿದ್ದು ಬಹಳ ಹಣ ಪೋಲು ಮಾಡಿ ಬಂದಿದ್ದೇವೆಂದಲ್ಲ. ಫ್ರಾನ್ಸ್, ಸ್ವೀಡನ್, ಡ್ಯಾನಿಡಾ, ಡೆನ್‌ಮಾರ್ಕ್ ಈ ಎಲ್ಲಾ ರಾಷ್ಟ್ರಗಳಲ್ಲಿ ಕರ್ನಾಟಕದ ಬಗ್ಗೆ ವಿಶೇಷವಾಗಿ, ಹಿಂದೂಸ್ಥಾನದಲ್ಲಿ ಇನ್‌ವೆಸ್ಟ್ ಮಾಡಬೇಕು ಎಂದು ಇದ್ದಾರೆ. ಆದರೆ ಬಹುತೇಕ ಜನ ಕರ್ನಾಟಕದಲ್ಲಿ ಇನ್‌ವೆಸ್ಟ್ ಮಾಡಬೇಕು ಎಂದು ಇದ್ದಾರೆ. ಇವತ್ತು ಸಹ ಅಮೇರಿಕನ್ ಡೆಲಿಗೇಷನ್ ಬಂದಿದ್ದಾರೆ. They are in town. ಅವರು ನಾವು ದೆಹಲಿಗೆ ಹೋಗುವುದಕ್ಕಿಂತ ಮುಂಚೆ ಬೆಂಗಳೂರಿಗೇ ಬಂದು ನೋಡಬೇಕಾಗಿತ್ತು ಎನ್ನುವ ಅಭಿಪ್ರಾಯ ಅವರಲ್ಲಿತ್ತು. ಅದರಿಂದ ಇಂತಹ ಒಂದು ಒಳ್ಳೆಯ ಅಭಿಪ್ರಾಯ ಬರುವ ಹಾಗೆ ಇಂಡಸ್ಟ್ರೀಯಲ್ ಮ್ಯಾನೇಜ್‌ಮೆಂಟ್ ಆಗಿದೆ. ಎಲ್ಲೋ ಅಲ್ಲಿ ಕೆಲವು ಸ್ಟ್ರೈಕ್ಸ್ ಆಗಿರುತ್ತವೆ. ಕೆಲವು ವರ್ಕರ್ಸ್ ಬೇಡಿಕೆಗಳು ಇತ್ಯರ್ಥ ಆಗದೇ ಇರುತ್ತದೆ. ಇರಬಹುದು, ಆದರೆ But, generally atmosphere in industrial management is good. Law and order maintenance is exemplary. Our priorities, we have really meant business. With those priorities, we have done. And some allegations like Biwater, ಅದಕ್ಕೆ ಈಗ ನಾವು ಈ ಪ್ರಾಜೆಕ್ಟ್‌ನ್ನು ಕೈಗೆ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಿದರೆ 2001 ನೇ ಇಸವಿಯ ಡಿಸೆಂಬರ್‌ಗೆ ನೀರು ಕೊಡುತ್ತೇವೆ.

12.50 ಪಿ.ಎಂ.

ಈಗ ಬೆಂಗಳೂರಿನಲ್ಲಿ ಆವರೇಜ್ ವಾಟರ್ ಸಪ್ಲೈ 90 ಲೀಟರ್ಸ್ ಪರ್ ಕ್ಯಾಪಿಟ ಇದ್ದರೆ ಬೊಂಬಾಯಿಯಲ್ಲಿ 200 ಲೀಟರ್ಸ್ ಮತ್ತು ದೆಹಲಿಯಲ್ಲಿ 220 ಲೀಟರ್ಸ್ ಪರ್ ಕ್ಯಾಪಿಟ ಇದೆ. ಬೆಂಗಳೂರು ನಗರ ಬೆಳೆಯಬೇಕು ನಿಜ, ಆದರೆ ಅದು ಹ್ಯಾಗೆ ಬೆಳೆಯಬೇಕು. ನೀರು ಮತ್ತು ವಿದ್ಯುಚ್ಛಕ್ತಿ ಇವು ಅತ್ಯಂತ ಅವಶ್ಯಕತೆವುಳ್ಳವು. ಈಗ ನಾವು ಪ್ಲಾನ್ ಮಾಡಿದರೆ ಅದು ಇನ್ನು ನಾಲ್ಕು ವರ್ಷಕ್ಕೆ ಆಗುತ್ತದೆ. ಅಷ್ಟೊತ್ತಿಗೆ ಇನ್ನೂ ಹತ್ತು ಲಕ್ಷ ಜನಸಂಖ್ಯೆ ಹೆಚ್ಚಾಗಿರುತ್ತದೆ. ಹಾಗಿದ್ದರೆ ಯೋಜನೆ ಎಂದರೇನು? ಅವತ್ತಿನದು ಅವತ್ತೇ ಅಡಿಗೆ ಮಾಡಿಕೊಂಡು ಉಣ್ಣುವುದಲ್ಲ. ಇನ್ನೈದು ವರ್ಷಗಳ ನಂತರ ನಮಗೆ ನೀರು ಬೇಕು ಎನ್ನುವುದಾದರೆ ನಾವು ಅದಕ್ಕೆ ಈಗಿನಿಂದಲೇ ಪ್ಲಾನ್ ಮಾಡಬೇಕು. ಬೈವಾಟರ್ ಸಂಸ್ಥೆಗೆ ಏಕೆ ಅದನ್ನು ವಹಿಸಿದಿರಿ? ಎಂಬುದು ನಿಮ್ಮ ಪ್ರಶ್ನೆ. ಮಾನ್ಯ ಸೋಮಣ್ಣನವರು ಅದರ ಬಗ್ಗೆ ಆಗಲೇ ಮಾತನಾಡುತ್ತಾ ಮೂರು ಸಂಸ್ಥೆಗಳ ಬಗ್ಗೆ ಹೇಳಿದ್ದಾರೆ. Everything has been done procedurally, strictly. ಒಂದು ವಿಚಾರವನ್ನು ನಾನು ಮಾನ್ಯ ಸುರೇಶ್‌ಕುಮಾರ್ ಮತ್ತು ಮಾನ್ಯ ನಂಜೇಗೌಡರ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಇಲ್ಲಿ ಏನೊಂದು ಇಂಪ್ರೆಷನ್ ಕೊಟ್ಟರು ಎಂದರೆ, ಬೈವಾಟರ್‌ನವರಿಗೆ ಮೊದಲೇ ಇವರು ಕೊಡಬೇಕೆಂದು ಏನೋ ಸಂಧಾನ ಮಾಡಿಕೊಂಡು ಅವರಿಗೇ ಆವಾರ್ಡ್ ಹೋಗುವ ಹಾಗೆ ಎಲ್ಲಾ ಸೇರಿ ಒಂದು ವ್ಯೂಹ ರಚನೆ ಮಾಡಿ ಗುತ್ತಿಗೆಯನ್ನು ಅವರಿಗೇ ಕೊಟ್ಟರು ಎಂದು ಹೇಳಿದರು. ಆ ರೀತಿ ಏನೂ ಇಲ್ಲ, ಬೈವಾಟರ್ ಸಂಸ್ಥೆ ಹೆಸರಿನ ಜೊತೆಗೆ ಮಲೇಶಿಯಾ ಮಂತ್ರಿಗಳ ಹೆಸರೊಬ್ಬರನ್ನು ಇಲ್ಲಿ ಪ್ರಸ್ತಾಪ ಮಾಡಲಾಯಿತು.

ಅವರು ನನಗೆ ಪರಮ ಮಿತ್ರರು. 1984ನೇ ಇಸವಿಯಲ್ಲಿ ಇಂಡಸ್ಟ್ರೀಸ್ ಮಿನಿಸ್ಟರ್ ಆಗಿ ಮಲೇಶಿಯಾಗೆ ಭೇಟಿ ನೀಡಿದ್ದಾಗ ಸ್ಯಾಮುಯಲ್ ನಮ್ಮ ಹೋಸ್ಟ್ ಆಗಿದ್ದರು. ಅವರೂ ಕೂಡ ಅಲ್ಲಿಯ ಇಂಡಸ್ಟ್ರೀಸ್ ಮಿನಿಸ್ಟರ್ ಆಗಿದ್ದರು. ಅವರು ಇಲ್ಲಿಗೆ ಬಂದಾಗ, ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಈ ಬೈವಾಟರ್ ಎಂಬುದೂ ಇರಲಿಲ್ಲ, ಯಾವ ವಾಟರ್ರೂ ಇರಲಿಲ್ಲ. ಈ ಐಡಿಯಾವೇ ಆಗ ಇರಲಿಲ್ಲ. ಪೇಪರ್‌ನಲ್ಲಿ ಅದಕ್ಕೊಂದು ಕಥೆ ಕಟ್ಟಿದರು. ಅದನ್ನು ನೀವ್ಯಾರೂ ಹೇಳಲಿಲ್ಲ, ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಆ ಮಿನಿಸ್ಟರಿಗೆ ಬಹಳ ಬೇಕಾದವರಾಗಿದ್ದುದರಿಂದ ಗುತ್ತಿಗೆಯನ್ನು ಬೈವಾಟರ್ ಸಂಸ್ಥೆಗೆ ವಹಿಸಿಕೊಡಲಾಯಿತು ಎಂದು ಪೇಪರ್‌ನಲ್ಲಿ ಕಥೆ ಕಟ್ಟಿ ಬರೆದರು. ಆ ಮಿನಿಸ್ಟರ್ ಆ ಬೈವಾಟರ್ ಸಂಸ್ಥೆಯಲ್ಲಿ ಬಹಳ ಸಣ್ಣ ಪಾಲುದಾರರು ಮಾತ್ರ. He is a very small partner. Major bulk of the money is from UK. ಆ ಕಂಪನಿ ಮಾಲೀಕರು ಅವರು; ಇವರಲ್ಲ. ಇವರು ಅದರಲ್ಲಿ ಪಾರ್ಟನರ್ ಇರಬಹುದು, ಅದರಲ್ಲಿ ಇವರ ಷೇರ್ ಇರಬಹುದು. ಅದನ್ನು ನಾನು ಡಿನೈ ಮಾಡುವುದಿಲ್ಲ. but the amount of investment is from Britain. ಈಗ ಸದನದಲ್ಲಿ ಮಾನ್ಯ ಸದಸ್ಯರು ಕೆಲವೊಂದು ದಾಖಲಾತಿಗಳನ್ನು ಇದರ ಬಗ್ಗೆ ನೀಡಿದರು, ನನಗೆ ಇದರಿಂದ ಬಹಳ ಆಶ್ಚರ್ಯವಾಯಿತು. ನಮ್ಮ ಅಧಿಕಾರಿಗಳಿಗೆ ಏನಾದರೂ ಸ್ವಲ್ಪ ಇಂಟೆಗ್ರಿಟಿ ಎಂಬುದು ಇದ್ದರೆ, ಏನಾದರೂ ಚರ್ಚೆ ಮಾಡುವಾಗ, ಹೇಳಬೇಕಾದುದೆಲ್ಲವನ್ನೂ ನಮ್ಮೆದುರಿಗೇ ಹೇಳಬೇಕು. ಅದನ್ನು ಅವರು ತೆಗೆದುಕೊಂಡು ನಿಮಗ್ಯಾಕೆ ಕೊಡಲಿಕ್ಕೆ ಹೋಗಬೇಕು. ಆ ಕೆಲಸವನ್ನು ನಮ್ಮ ಅಧಿಕಾರಿಗಳು ಇವತ್ತು ಮಾಡುತ್ತಿದ್ದಾರೆ. ಏನಾದರೂ ತಪ್ಪಿದ್ದರೆ, ಇಲ್ಲಿ ತಪ್ಪಿದೆ ಎಂದು ಅವರು ನಮ್ಮ ಮುಖಕ್ಕೆ ಹೊಡೆದಂತೆ ಹೇಳಲಿ. ಇಲ್ಲಿ ಯಾವ ಕಮಿಟಿಯೂ ಇಲ್ಲ, ಯಾವ ಮಣ್ಣಾನುಗಟ್ಟೇನೂ ಇಲ್ಲ. ಮಾನ್ಯ ಸುರೇಶ್‌ಕುಮಾರ್‌ರವರೇ, ಇಲ್ಲಿ ಯಾವ ಕಮಿಟಿಯೂ ಕೂಡ ಇಲ್ಲ. ಚೀಫ್ ಸೆಕ್ರೆಟರಿ ಕರೆದರು, ಇವರು ಹೋದರು, ಎಲ್ಲಾ ವಿಚಾರ ಮಾಡಿದರು. ಇದರ ಬಗ್ಗೆ ಸರ್ಕಾರ ತೀರ್ಮಾನ ಮಾಡಲಿಲ್ಲ ಎನ್ನುತ್ತಾರೆ. ಇವರಿಗೇನು ಜವಾಬ್ದಾರಿ ಇಲ್ಲವೇ? ಈಗ ನಾವೇನೂ ಹೇಳಲಿಲ್ಲ, ಅದಕ್ಕೋಸ್ಕರ ಅದರೊಳಗೆ ಯಾರದ್ದೋ ಒಂದು ಇನ್‌ಫ್ಲುಯೆನ್ಸ್ ನಡೆಸಿದರು, ಈ ತರಹ ಅರ್ಥ ಬರುವಂತೆ ಪತ್ರಿಕೆಗಳಲ್ಲಿ ಸುದ್ಧಿ; ತಮಗೆಲ್ಲಾ ಸಚಿವ ಸಂಪುಟದ ಸಣ್ಣ ನೋಟ್‌ಗಳನ್ನು ಅಧಿಕಾರಿಗಳು ಕೊಟ್ಟಿದ್ದಾರೆ. ಅದಕ್ಕೇ ನಾನು ಹೇಳುವುದು, ಸರ್ಕಾರ ನಾವಾದರೂ ನಡೆಸಲಿ, ನೀವಾದರೂ ನಡೆಸಲಿ, ಸರ್ಕಾರ ನಡೆಸುವಾಗ ಅವರಿಗೆ ಒಂದಿಷ್ಟು ಮಾನ ಮರ್ಯಾದೆಯಾದರೂ ಇರಬೇಕು. ಯಾವ ಸರ್ಕಾರದ ಉಪ್ಪು ತಿನ್ನುತ್ತಾರೋ ಅದಕ್ಕೆ ಅವರು ಋಣಿಗಳಾಗಿರಬೇಕು. ಉಂಡ ಮನೆಗೆ ಇರಿಯಬಾರದು. ಆದರೆ ಇವರು ಎಲ್ಲಿ ಉಣ್ಣುತ್ತಾರೋ ಅವರಿಗೆ ದ್ರೋಹ ಮಾಡುತ್ತಿದ್ದಾರೆ. ಹೀಗೆ ಮಾಡಬಾರದು. ಇಲ್ಲಿ ಯಾವ ಕಮಿಟಿಯನ್ನೂ ಮಾಡಿಲ್ಲ, ಯಾರದೂ ರೆಕ್ಮಂಡೇಷನ್ನೂ ಇಲ್ಲ. ಯಾರ ಪ್ರಭಾವವೂ ಇದರಲ್ಲಿ ಇಲ್ಲ. ಇಲ್ಲಿ ಮೂರು ಸಂಸ್ಥೆಗಳ ಬಗ್ಗೆ ಮಾರ್ಕ್ಸ್ ಹೇಗೆ ಕೊಟ್ಟಿದ್ದಾರೆ? ಟಾಟಾ ಕನ್ಸೆಲ್‌ಟಿಂಗ್ ಇಂಜಿನಿಯರ್, ಟಾಟಾ ಕನ್ಸೆಲ್‌ಟೆನ್ಸಿ ಸರ್ವೀಸ್, ಬಿಡಬ್ಲ್ಯುಎಸ್‌ಎಸ್‌ಬಿ ಆ ಮೂರು ಸಂಸ್ಥೆಗಳು. ಬಿಡಬ್ಲ್ಯುಎಸ್‌ಎಸ್‌ಬಿ ಅಂದರೆ ನಮ್ಮದೇ ಸಂಸ್ಥೆ. ಇವರಿಗೇನು ಯೋಗ್ಯತೆ ಇದೆ? ಎಂದು ಕೇಳುತ್ತೀರಿ. ಇಷ್ಟು ವರ್ಷಗಳ ಕಾಲ ವಾಟರ್ ಸಪ್ಲೈ ಮಾಡಿರುವವರು, ಇದನ್ನು ಮ್ಯಾನೇಜ್ ಮಾಡಿರುವವರು ಈ

ಸಂಸ್ಥೆಯವರೇ. ಬೂಟ್ (Boot) ಎಂದರೆ ಏನು ಎಂಬುದು ನಿಮಗೆ ಗೊತ್ತಿದೆ. ಹಾಗೆ ಯಾರನ್ನೂ ಬೂಟ್ ಮಾಡುವುದಕ್ಕೆ ಹೋಗಿಲ್ಲ. ಇಲ್ಲಿರುವುದು right royal way, transparency is there and we are under no obligation by anybody. ಕೊಟ್ಟಿರುವ ಮಾರ್ಕ್ಸ್‌ಗಳ ವಿವರ ನನ್ನ ಬಳಿ ಇವೆ. ಟೆಕ್ನಿಕಲ್ ಪ್ರಪೋಸಲ್, ಓ ಅಂಡ್ ಎಂ ಪ್ರಪೋಸಲ್ ಒಬ್ಬರದು. ಓ ಅಂಡ್ ಎಂ ಎಕ್ಸ್‌ಪೀರಿಯನ್ಸ್, ಬೂಟ್ (Boot) ಎಕ್ಸ್‌ಪೀರಿಯನ್ಸ್ ಇನ್ನೊಬ್ಬರದು. ಫೈನಾನ್ಷಿಯಲ್ ಅರೇಂಜ್‌ಮೆಂಟ್ಸ್ ಪ್ರಪೋಸಲ್ ಅಂಡ್ ಕಮರ್ಷಿಯಲ್ ಪ್ರಪೋಸಲ್ ಹೀಗೆ three agencies being operated ಅದನ್ನು ಟೋಟಲ್ ಮಾಡಲಾಯಿತು. ಬಿಡಬ್ಲ್ಯುಎಸ್‌ಎಸ್‌ಬಿ ನವರು ಬೇಕು ಎಂತಲೇ ಬೈವಾಟರ್‌ನವರಿಗೆ ಕೊಟ್ಟರು ಎಂದು ಹೇಳಲಾಗುತ್ತಿದೆ. 69 ಪಾಯಿಂಟ್ ಬೋವೀಸ್‌ಗೆ ಕೊಟ್ಟರೆ 31 ಪಾಯಿಂಟ್ ಬೈವಾಟರ್‌ಗೆ ಕೊಟ್ಟಿದ್ದಾರೆ. ಅವರಿಗೆ ಇವರಿಗೇ ಕೊಡಬೇಕೆಂದು ಇಚ್ಛೆ ಇದ್ದರೆ ಜಾಸ್ತಿ ಪಾಯಿಂಟ್‌ಗಳನ್ನು ಕೊಡುತ್ತಿದ್ದರು. ಬೂಟ್ ಅಂದರೆ ಆ ಎಕ್ಸ್‌ಪೀರಿಯನ್ಸ್ ಇರುವವರೇ ಆಗಿರಬೇಕು. ಆಪರೇಟ್ ಮಾಡಿ ಅದನ್ನು ಮತ್ತೆ ಟ್ರಾನ್ಸ್‌ಫರ್ ಮಾಡಿಕೊಟ್ಟು ಹೋಗಬೇಕು. ಅದರಲ್ಲಿ ಬೋವೀಸ್‌ಗಿಂತ ಇವರಿಗೆ ಜಾಸ್ತಿ ಮಾರ್ಕ್ಸ್ ಬಂದಿದೆ. ಇದರೊಳಗೆ ಯಾರನ್ನು ಯಾರು ಫೇವರ್ ಮಾಡಲಿಕ್ಕೆ ಹೋಗಿದ್ದಾರೆ? ಇದೆಲ್ಲಕ್ಕಿಂತ ಮುಖ್ಯವಾಗಿ ಇನ್ನೊಂದು ಪ್ರಾಮುಖ್ಯವಾದ ವಿಚಾರವೇನೆಂದರೆ, the most important thing is Government has not given consent for agreement with anybody. Cabinet has only authorised the BWSSB to negotiate, ಮೂರು ಜನರ ಪೈಕಿ ಇವನ ಹತ್ತಿರ ನೆಗೋಷಿಯೇಟ್ ಮಾಡಿ ಎಂದು ಹೇಳಿದ್ದೇವೆ. ಅದಕ್ಕೆ ಏಕೆ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಬೇಕು? ಇದರ ಬಗ್ಗೆ ಇನ್ನೂ ಅಗ್ರಿಮೆಂಟೇ ಆಗಿಲ್ಲ. ಒಂದು ವೇಳೆ ಅಗ್ರಿಮೆಂಟ್ ಏನಾದರೂ ಆಗಿದ್ದರೆ, ಇದರಲ್ಲಿ ಈ ತರಹ ಡಿಫೆಕ್ಟ್ ಇದೆ ಎಂದು ಹೇಳಿದ್ದರೆ ಅದೊಂದು ತರಹ. ಆದರೆ ಇಲ್ಲಿ ಇನ್ನೂ ಕೂಸೇ ಹುಟ್ಟಿಲ್ಲ. ಅದಕ್ಕೆ ಚಿಕಿತ್ಸೆ ಮಾಡಲಿಕ್ಕೆ ಹೊರಟಿದ್ದೀರಿ. ಅದನ್ನೇ ನಾನು ಹೇಳಿದ್ದು. ನಾವು ಯಾವುದೇ ಅಗ್ರಿಮೆಂಟ್ ಮಾಡಿಕೊಂಡಿಲ್ಲ. We have authorised the BWSSB to negotiate with these Companies. If they did not come to our expectations, we may not agree. ಹೀಗಿರುವಾಗ ಮಾನ್ಯ ವಾಟಾಳ್ ನಾಗರಾಜ್‌ರವರೇ, ಎಲ್ಲಾದರಲ್ಲೂ ಕೂಡ ಸಂಶಯಪಡಬಾರದು. ಮಾನ್ಯ ನಂಜೇಗೌಡರು ಮಾತನಾಡುತ್ತಾ, ನಿಮಗೆ ನಿಜವಾಗಿಯೂ ದೇವರಲ್ಲಿ ನಂಬಿಕೆ ಇದ್ದರೆ ಎಂಬ ಪದ ಬಳಸಿದರು. ಯಾವ ದೇವರಲ್ಲಿ ಇರುವ ನಂಬಿಕೆ ಬಗ್ಗೆ ಕೇಳಿದಿರಿ. ಹಿಂದೂಗಳ ದೇವರೇ, ಕ್ರೈಸ್ತರ ದೇವರೇ, ಮುಸಲ್ಮಾರ ದೇವರೇ, ಅಥವಾ ಹಿಂದೂಗಳಲ್ಲೇ ಇರತಕ್ಕಂಥ 36 ಸಾವಿರ ದೇವರುಗಳೇ? ದೇವರು ಎಂಬ ಬಗ್ಗೆ ನಮ್ಮ ಕಾನ್‌ಸೆಪ್ಟ್ ಏನು? ನಮ್ಮ ಮನಸ್ಸಿನಲ್ಲಿರುವಂತಹ ನಿಜವನ್ನು ಯಾರನ್ನು ಕುರಿತು ಹೇಳಿದರೂ, ಅವರು ದೇವರೇ. ಗಾಂಧಿಜೀಯವರು ಒಂದು ಕಡೆ ಏನು ಹೇಳುತ್ತಾರೆ ಎಂದರೆ, ನನ್ನನ್ನು ಎಲ್ಲರೂ ಮಹಾತ್ಮಾ ಎಂದು ಕರೆದು ನನ್ನನ್ನು ದೇವರ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಾರೆ, ನಾನು ದೇವರ ಮಟ್ಟಕ್ಕೆ ಹೋಗಿಲ್ಲ, ನಾನು ಪಾಲಿಟಿಷಿಯನ್, but I am trying to become a shine I am not a sun ಎಂದು ಗಾಂಧೀಜಿ ಹೇಳಿದ್ದಾರೆ. ಗಾಂಧೀಜಿಯವರಿಗೇ ಈ ರೀತಿಯ

ಅಭಿಪ್ರಾಯ ಇರುವಾಗ, ಅವರ ಮುಂದೆ ನಾವೆಲ್ಲಾ ಬಹಳ ಅಲ್ಪರು. ನನಗೂ ದೇವರಲ್ಲಿ, ಮಾನವನಿಗೆ ಮೀರಿದ ಒಂದು ಶಕ್ತಿಯಲ್ಲಿ ವಿಶ್ವಾಸ ಇದೆ. ಅದನ್ನು ಮೆಚ್ಚಿಸುವುದಕ್ಕೋಸ್ಕರ ನಾವು ಏನೆಲ್ಲಾ ಮಾಡುತ್ತೇವೆ. ಈಗ ನಾವು ಪ್ರತಿಯೊಂದರಲ್ಲೂ ದೇವರು ಮೆಚ್ಚುವ ಹಾಗೆ ಕೆಲಸ ಮಾಡಬೇಕು ಎಂದು ಹೇಳುತ್ತೇವೆ. ನೀವೂ ಕೂಡ ಅದೇ ಮಾತನ್ನು ಹೇಳಿದ್ದು. ಇದರೊಳಗೆ ದೇವರು ಮೆಚ್ಚದೇ ಇರುವಂತಾದ್ದು ಏನಿದೆ? ಹೋಗಲಿ, ನನಗೇನಾದರೂ ಅಳುಕು ಇದ್ದರೆ, ನನ್ನ ಸರ್ಕಾರದಲ್ಲಿ ಯಾರಿಗಾದರೂ ಇದರೊಳಗೆ ಏನಾದರೂ ನಾವು ತಪ್ಪು ಮಾಡಿದ್ದೇವೆ ಎಂತಿದ್ದರೆ, ಆ ಕ್ಷಣ ನಾವು ಈ ಸರ್ಕಾರದಲ್ಲಿ ಇರುವುದಿಲ್ಲ. ನಾವು ಅಷ್ಟು ಶುದ್ಧವಾಗಿ ಆಲೋಚನೆ ಮಾಡಿ ತೆಗೆದುಕೊಂಡಿದ್ದೇವೆ. ಆದರೂ ನಿಮಗೆ ಅದರ ಬಗ್ಗೆ ಎಲ್ಲಿ ನೋಡಿದರೂ ದೆವ್ವ, ಭೂತಗಳೆ ಕಾಣುತ್ತವೆ. ಏಕೆಂದರೆ, you can see the devils everywhere even though they don't exist. You can see the devils, ಹಾಗೆ ನೋಡಬಾರದು. ಸರ್ಕಾರ ಏನೇ ನಿಲುವು ತೆಗೆದುಕೊಂಡಿರುವುದು ತಪ್ಪಾಗಿದ್ದರೆ ಅದಕ್ಕೆ ನಿಮ್ಮ ಬಳಿ ರುಜುವಾತುಗಳಿದ್ದರೆ, ಅದಕ್ಕೆ ಸಾಕಷ್ಟು ಆಧಾರಗಳಿದ್ದರೆ, ಬೇಕಾದರೆ ಎನ್‌ಕ್ವೈರ್ ಮಾಡಿಸಿ, ಕೋರ್ಟ್‌ಗೆ ಕೇಸ್ ಹಾಕಿ. ಬೇಕಾದರೆ ಜಾಮೀನಿನ ಮೇಲೆ ಓಡಾಡುವ ಹಾಗೆ ಮಾಡಿ. ನಾವಿನ್ನೂ ಜಾಮೀನಿನ ಮೇಲೆ ಓಡಾಡುವಂತಹ ಪರಿಸ್ಥಿತಿಗೆ ಬಂದಿಲ್ಲ. ನಾವು ಇವತ್ತು ಧೈರ್ಯವಾಗಿ ಜನರ ಮುಂದೆ ತಲೆ ಎತ್ತಿಕೊಂಡು ಓಡಾಡುತ್ತೇವೆ. ಅದನ್ನು ಬಿಟ್ಟು ಎಲ್ಲಾದಕ್ಕೂ ಉದ್ದೇಶಪೂರ್ವಕವಾಗಿ ಹೀಗೆ ಮಾಡಿದ್ದೀರಿ ? ಆ ಸಂಸ್ಥೆಗೇ ನೀಡಬೇಕೆಂದು ಹೀಗೆ ಮಾಡಿದ್ದೀರಿ ಎಂದು ಹೇಳುವುದಕ್ಕೆ ಹೋಗಬೇಡಿ. don't attribute motives. If there is any legal or technical flaw, if there is any mistake committed by the Government, you are welcome to advice but don't see ghost where they don't exist ಯಾವ್ಯಾವ ಅಧಿಕಾರಿಗಳು ಯಾವ್ಯಾವ ನೋಟ್‌ಗಳು ಕೊಟ್ಟಿರೋ, ಅದು ಏನೇನು ಆಗಿದೆಯೋ ಗೊತ್ತಿಲ್ಲ. ಅಫಿಷಿಯಲ್ ನೋಟೇ ಬೇರೆ ಇದೆ, ನೀವು ಇಲ್ಲಿ ಓದುತ್ತಿರುವ ನೋಟೇ ಬೇರೆ ಇದೆ. ಯಾರೋ ಅಂಡರ್ ಸೆಕ್ರೆಟರಿ ಸೈನ್ ಇದೆ ಎಂದು ಇವರು ಒಂದು ನೋಟ್ ಓದಿದರು. ಓವರ್ ಸೆಕ್ರೆಟರಿ ಸೈನ್ ಇದೆ ಎಂದು ನೀವು ಒಂದು ಓದಿದಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಗವರ್ನಮೆಂಟ್ ಆರ್ಡರ್ ಅಧೀನ ಕಾರ್ಯದರ್ಶಿ ಹೆಸರಿನಲ್ಲಿ ಹೊರಡುತ್ತವೆ. ನಿಮ್ಮ ಹೆಸರಿನಲ್ಲಿ ಹೊರಡುವುದಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ನೀವು ಯಾವುದೋ ಪೇಪರ್ ಹಿಡಿದುಕೊಂಡು ಹೇಳಿದರೆ ಹೇಗೆ? ಅದು ಸರ್ಕಾರ ಕೊಟ್ಟ ಆದೇಶವಾಗಿದ್ದರೆ either he should be punished or the Government should be punished. ಅದು ಪ್ರೊಸೀಡಿಂಗ್ಸ್ ಆಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾವುದೋ ಪೇಪರ್ ಅಲ್ಲ. ಬೇಕಾದರೆ ನಿಮಗೆ ಕೊಡುತ್ತೇನೆ ನೋಡಿ. you make it part of this proceedings.

(ಈ ಹಂತದಲ್ಲಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನೀಡಿದ ಜಿ. ಓ. ಪ್ರತಿಯನ್ನು ಇಲ್ಲಿ ಲಗತ್ತಿಸಿದೆ)

PROCEEDINGS OF THE GOVERNMENT OF KARNATAKA

Sub :- Implementation of Cauvery Water Supply Scheme stage IV-Phase-II, Stage-V Through private sector participation on BOOT basis- Reg.

GOVT. ORDER NO UDD 48 UNI 97 BANGALORE DATED : 20TH JUNE 1997.

READ :- D.O Letter No. 78 CHO 97 Dated : 13-3-97, 27-3-97 and 21-5-97 of the Chairman, Bangalore. Water Supply & Sewerage Board, Bangalore.

PREAMBLE :

The Cauvery Water Supply Scheme Stage-IV Phase-I project is under implementation by Bangalore Water supply & sewerage Board through OECF assistance and is expected to be completed by 31-3-2002, Out of the 9 TMC of water allotted to Cauvery stage IV project, phase-I project will be utilising 270 MLD leaving a balance of about 500 MLD. In the normal course, the cauvery Stage-IV, Phase-II scheme for bringing 270 MLD of water to Bangalore would be implemented during the period 2003-2007 AD and the Cauvery stage-V would have been completed afterwards during the period 2009-2012 AD.

The present level of supply of water in Bangalore is about 90 LPCD. The population of Bangalore is increasing at a rapid rate and it will never be possible to increase the present LPCD unless the implementation of these future projects is preponed. It is therefore essential that the possibility of implementing Cauvery water supply scheme IV stage, Phase-II and Cauvery water supply scheme Stage-V as a single project which can bring 500 MLD of water to Bangalore is explored.

The Chairman, Bangalore water supply and Sewerage Board in his letter read above sent a proposal of M/s Biwater shellabear (Malaysia) Sd n. Bhd stating that the Cauvery water supply scheme stage-IV phase-II and Cauvery water supply scheme stage-V can be combined and the scheme can be offered for private participation, bringing about 500 MLD of water to Bangalore city.

Government is a policy feels that water supply in Bangalore should be privatised to make it more responsive efficient to the needs of the people and that the B.W.S.&. SMB. shall call for global tenders to get the competitive responseson good and beneficial terms. Hence the following order.

ORDER :

After careful examination of the above facts, Government are pleased to accord sanction for :-

a) The implementation of Cauvery Water Supply Scheme for bringing 500 MLD of water to Bangalore.

b) The implementation of the project through private sector participation of BOOT basis.

The Bangalore water supply & Sewerage Board, Bangalore shall call for global tenders inviting offers from internationally known firms for preparation, execution and operation of the Cauvery Water Supply Scheme IV stage, Phase-II and Cauvery Water Supply Scheme V stage simultaneously.

BY ORDER & IN THE NAME OF THE GOVERNOR OF KARNATAKA

(T.N. NARASIMHA MURTHY)
Under Secretary to Government,
Urban Development Department,(Boards)

ಶ್ರೀ ಜೆ.ಹೆಚ್. ಪಟೇಲ್ : ಕೊಡಿ ಅದು ನಿಜವಾಗಿ ಗವರ್ನಮೆಂಟ್ ಆಫೀಸರ್ ಕೊಟ್ಟ ಡಾಕ್ಯುಮೆಂಟೇ ಎಂಬುದನ್ನು ನೋಡೋಣ. ಆದರೆ ಪ್ರೊಸೀಡಿಂಗ್ಸ್ ಆಗಿಲ್ಲ ಒಂದು ಮೀಟಿಂಗ್ ಆಗಿಲ್ಲ. ಅದರ ಅಥೆಂಟಿಸಿಟಿ, ಅದು ನಿಜವೋ, ಸುಳ್ಳೋ ಏನು ಎಂಬುದು ಪತ್ತೆಯಾಗಲಿ. ಅದು ನಿಜವಾಗಿದ್ದರೆ, ಆ ತರಹ ಬಿ.ಡಬ್ಲ್ಯು.ಎಸ್.ಎಸ್.ಬಿ. ಛೇರ್ಮನ್ ಬೈವಾಟರ್‌ಗೆ ಕೊಡಬೇಕೆಂದು ಪ್ರಯತ್ನ ಮಾಡಿದರು ಎಂದರೆ, ಕ್ರಮ ತೆಗೆದುಕೊಳ್ಳುತ್ತೇನೆ. That officer shall be punished ಸುಮ್ಮನೆ ಇಮ್ಯಾಜಿನ್ ಮಾಡಿಕೊಂಡು ಯಾವುದೋ ಒಂದು ಪತ್ರ ಬಂದಿದೆ ಎಂದು ಹೇಳಿದರೆ....

ಶ್ರೀ ಹೆಚ್.ಎನ್. ನಂಜೇಗೌಡ : ಯಾವುದೋ ಪತ್ರವೆಂದು ನೀವು ಹೇಗೆ ಹೇಳುತ್ತೀರಿ ? ನಾವೇನು ಮೂರ್ಖರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲವೆಂದು ಹೇಳಿ ; ಅದನ್ನು ಬಿಟ್ಟು ಪದೇ ಪದೇ ನಾವೆಲ್ಲಾ ದಡ್ಡರು ಇಲ್ಲಿ ಕೂತವರಿಗೆ ಬುದ್ಧಿ ಇಲ್ಲ, ಬರೀ ನಿಮ್ಮೊಬ್ಬರಿಗೆ ಇದೆ, ಕಾಂಟ್ರ್ಯಾಕ್ಟ್ ತೆಗೆದುಕೊಂಡಿರುವ ಹಾಗೆ ಮಾತನಾಡುತ್ತೀರಿ.

ಶ್ರೀ ಜೆ.ಹೆಚ್. ಪಟೇಲ್ : ನೀವು ಇಲ್ಲಿ ಅದನ್ನು ಹೇಳಿದ ಮೇಲೆ ಅದು ಸರಿ ಹೋಯಿತು. ರಾಜ್ಯಪಾಲರ ಭಾಷಣದ ಮೇಲೆ ತಾವು ಕೊಟ್ಟ ಸಲಹೆಗಳಿಗೆ ಉತ್ತರವಾದ ನಂತರ ಕೆಲವು ಕ್ಲಾರಿಫಿಕೇಷನ್ ಕೇಳಿ ಬಡ್ಜೆಟ್ ಮೇಲೆ ಆಗಲೇ ಸಾಕಷ್ಟು ಚರ್ಚೆ ಮಾಡಿದ್ದೀರಿ, ಬಡ್ಜೆಟ್ ಒಪ್ಪಿಕೊಂಡಿದ್ದೀರಿ. ಈ ಹಿನ್ನೆಲೆಯಲ್ಲಿ ತಾವು ಏನಾದರೂ ಪ್ರಶ್ನೆ ಕೇಳುವುದಾದರೆ ಕೇಳಬಹುದು. ನಾನು ಹೇಳುವುದು ರಾಜ್ಯಪಾಲರ ಭಾಷಣ, ಅದು ಒಂದು ವಿಚಾರ. ನಮ್ಮ ಬಡ್ಜೆಟ್ ಒಂದು ಆಚಾರ, ನೀವು ಹೇಳಿದ ಹಾಗೆ ಇದೊಂದು ಪ್ರಚಾರ ಎಂದು ಆಗಬಹುದು. ಆದರೂ ಇದನ್ನು ಮಾಡುವುದು ಜನರ ಉದ್ದೇಶಕ್ಕೆ ; ಜನರನ್ನು ಗಮನದಲ್ಲಿಟ್ಟುಕೊಂಡು ಮಾಡಿದರೂ ನೀವು ಚುನಾವಣೆ ಎಂದು ಹೇಳುತ್ತೀರಿ. ಅದೂ ನಿಜ ; ನಾನೂ ಇಲ್ಲವೆಂದು ಹೇಳುವುದಿಲ್ಲ. ನಮಗೂ ಚುನಾವಣೆ ಗುರಿ ಇದೆ ; ನಾವೇನೂ ಹತಾಶರಾಗಿ ಕುಳಿತಿಲ್ಲ. ನಮಗೆ ಗುರಿ ಇದೆ, ಕಾನ್‌ಫಿಡೆನ್ಸ್ ಇದೆ. That is why we talk of our achievements. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಅವರದೇ, ಆದ ಧಾಟಿಯಲ್ಲಿ ಉತ್ತರ ಕೊಟ್ಟಿದ್ದಾರೆ. ವಿಚಾರ, ಪ್ರಚಾರ ಎಲ್ಲಾ ಹೇಳಿದರು. ಗವರ್ನರ್ ಭಾಷಣ ಒಂದು ವಿಚಾರ, ಬಡ್ಜೆಟ್ ಒಂದು ಆಚಾರ, ಅವರು ಇಲ್ಲಿ ಹೇಳುವುದು ಒಂದು ಪ್ರಚಾರ ಜನರಿಗೆ ಮಾತ್ರ ಇವರಿಂದ ಗ್ರಾಚಾರ ತಪ್ಪಿಲ್ಲ. ಅದು ಮಾತ್ರ ಟೈಮ್ ಬಂದರೆ ತಾವು ಒಪ್ಪಿಕೊಳ್ಳುತ್ತೀರಿ. ಎರಡನೆಯದು ಗಂಗಾ ಕಲ್ಯಾಣದ ಬಗ್ಗೆ ಮತ್ತು ಟೀಚರ್ಸ್ ಬಗ್ಗೆ ಹೇಳಿಕೊಂಡರು.

ಹಿಂದಿನ ಸರ್ಕಾರದ ಸಾಧನೆ ಎಲ್ಲಾ ಪ್ರಸ್ತಾಪ ಮಾಡಿದರು. ಗಂಗಾ ಕಲ್ಯಾಣ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡಿ ಅದಕ್ಕೆ ಸಾಕಷ್ಟು 9,050 ಬಾವಿಗಳನ್ನು ತೆಗೆದರೂ ಕೂಡ ಅದನ್ನು ಸರ್ಕಾರದಿಂದ

ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಮೋಟರ್ ಸಪ್ಲೈ ಮಾಡದೇ ಇದ್ದುದ್ದರಿಂದ ಇನ್ನೂ ಯಾವುದೂ ಎನ್‌ರ್ಜೈನ್ ಆಗಿಲ್ಲ. ಅವು ಅಲ್ಲೇ ಕೂತಿವೆ. ಎರಡನೆಯದು ಟೀಚರ್ಸ್ ಅಪಾಯಿಂಟ್‌ಮೆಂಟ್ ಒಂದು ರೂಟೀನ್ ಕೋರ್ಸ್. ಉದಾಹರಣೆಗೆ 1976 ರಲ್ಲಿ ನಾನು ಶಿಕ್ಷಣ ಸಚಿವನಾಗಿದ್ದೆ. ಟೋಟಲ್ ಸ್ಟ್ರೆಂಥ್ ಒಂದು ಲಕ್ಷದ ಐದು ಸಾವಿರ ಇತ್ತು. ಪ್ರತಿ ಸಲ ಪಾಪ್ಯುಲೇಷನ್ ಜಾಸ್ತಿಯಾದ ಹಾಗೆ ವೇಕೆನ್ಸಿ ಬಂದ ಹಾಗೆ, we have to do it. It is a routine course.. ಕಂಪಲ್ಸರಿ ಎಜ್ಯುಕೇಷನ್ ನಾವು ಒಪ್ಪಿಕೊಂಡ ಮೇಲೆ ಇದು ನಮ್ಮ ಡ್ಯೂಟಿ. ಹಿಂದಿನವರೂ ಮಾಡಿಕೊಂಡು ಬಂದಿದ್ದಾರೆ. ಈಗಲೂ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ 10,000, 20,000 ವೇಕೆನ್ಸಿ ಇರಬಹುದು, ಇಲ್ಲವೆಂದು ಇಲ್ಲ. ಅದಕ್ಕೆ ಪ್ರತಿ ವರ್ಷ ಇದು ಮೂರನೇ ವರ್ಷ ನೀವು ಹೇಳುತ್ತಿರುವುದು. ನೀವು ಬೇಕಾದರೆ ದಾಖಲೆ ತೆಗೆದು ನೋಡಿ. ನಿಮ್ಮ ಅಚೀವ್‌ಮೆಂಟ್‌ನಲ್ಲಿ ಇದು ಖಾಯಂ. ಪವರ್ ಕಾರ್ಪೊರೇಷನ್, ಎನರ್ಜಿ ಯಾರೂ ಉತ್ಪಾದನೆ ಮಾಡಲಿಲ್ಲವಾ, ಎಲ್ಲಾ ಬೆಳಕು ನಿಮ್ಮದೇ. ಹಿಂದೆ ಮಾಡಿದ್ದರೂ ಮಾಡಿಲ್ಲವೆಂದು ಹೇಳುವುದು, ಮೊದಲು ನಾವು ಇಲ್ಲಿ ಮಾತನಾಡುವಾಗ ನಾವು ಎಷ್ಟು ಹಣ ಖರ್ಚು ಮಾಡಿದ್ದೇವೆ, ರಿಲೇಟಿವ್‌ಲಿ, ಅಷ್ಟು ನಮ್ಮ ಫಿಸಿಕಲ್ ಟಾರ್ಗೆಟ್ ಅಚೀವ್ ಮಾಡುವುದಕ್ಕೆ ಆಗಿಲ್ಲ ಎನ್ನತಕ್ಕಂಥಾದ್ದು ಮಾನ್ಯ ಉಪ ಮುಖ್ಯಮಂತ್ರಿಯವರು ಮಾತನಾಡುವಾಗಲೇ ಎಲ್ಲಾ ಯುಕೆಪಿಯಾಗಲಿ ಇಲಾಖೆಗಳ ಬಗ್ಗೆ ಹೇಳಿದ್ದೇವೆ. ನಿಮ್ಮ ಹಣ ಎಷ್ಟು ಖರ್ಚಾಗಿದೆ, ಅದೇ ರಿಲವೆಂಟ್ ಪೀರಿಯಡ್‌ನಲ್ಲಿ ಹಿಂದೆ ಕೂಡ ಹಣ ಖರ್ಚಾಗಿದ್ದರೆ, ಅದಕ್ಕೆ ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ಎಷ್ಟಾಗಿದೆ ಎನ್ನತಕ್ಕಂಥದ್ದನ್ನು ನಾವು ಅಂಕಿ ಅಂಶಗಳನ್ನು ಇಟ್ಟುಕೊಂಡು ಹೇಳಿದ್ದೇವೆ. ಸುಮ್ಮನೆ ಏನೂ ಉಡಾಫೆಯಿಂದ ಹೇಳಿಲ್ಲ. ನೀವು ಕೊಟ್ಟಂತಹ ನಿಮ್ಮ ಬಡ್ಜೆಟ್, ನಮ್ಮ ಸಿಎಜಿ ರಿಪೋರ್ಟ್ ಪ್ರತಿ ವರ್ಷ ಆಗತಕ್ಕಂತಹ ಖರ್ಚು ಮತ್ತು ಅದಕ್ಕೆ ಬರತಕ್ಕಂತಹ ನಮ್ಮ ಫಿಸಿಕಲ್ ಅಚೀವ್‌ಮೆಂಟ್ ಟಾರ್ಗೆಟ್ ಹೋಲಿಸಿಕೊಂಡು ಫಿಸಿಕಲ್ ಅಚೀವ್‌ಮೆಂಟ್ ಇವೆಲ್ಲಾ ಕೂಡ ಹೇಳಿದ್ದೇವೆ. ಅದರಲ್ಲಿ ಯಾವುದೂ ಹಿಂದೆ ಹೋಗತಕ್ಕಂಥದ್ದು ಅಲ್ಲ, ಮುಂದೆ ಹೋಗತಕ್ಕಂಥದ್ದು ಅಲ್ಲ. ತಾವೂ ಕೂಡ ಒಂದು ಸಾರಿ ನೋಡಿದರೆ ಇಷ್ಟೊಂದು ಹಣ ಖರ್ಚು ಮಾಡಿ ನೀರಾವರಿಯಲ್ಲಿ 7,000 ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿ ಎಷ್ಟು ಹೆಕ್ಟೇರ್ಸ್‌ನ್ನು ತಾವು ಇರಿಗೇಟ್ ಮಾಡಿದ್ದೀರಿ, ಹಿಂದೆ ಅಷ್ಟೇ ಐದು ವರ್ಷಗಳಲ್ಲಿ ಯಾವುದೇ ಲೆಕ್ಕ ತೆಗೆದುಕೊಂಡರೆ, ಅದು 2,000 ಕೋಟಿ ಇರಬಹುದು, ಎಷ್ಟೇ ಇರಬಹುದು, ಅದಕ್ಕೆ ಎಷ್ಟು ಎಕರೆಗೆ ನೀರಾವರಿಯಾಗಿದೆ ಅದನ್ನು ಕೂಡ ತಾವು ನೋಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಅದಕ್ಕಾಗಿ ಅದನ್ನು ಸಾರಾಸಗಟಾಗಿ ಹಿಂದಿನವರು ಏನೂ ಮಾಡಿಲ್ಲ, ಎಲ್ಲಾ ನಾವೇ ಮಾಡಿದ್ದೇವೆಂದು ಹೇಳತಕ್ಕಂಥದ್ದು ಅಷ್ಟೊಂದು ಸಮಂಜಸವಲ್ಲ. ಲೋನ್ ತಂದು ನಾನು ಜನರಿಗೆ ಹೋಳಿಗೆ ಊಟ ಹಾಕಿಸುತ್ತಿದ್ದೇನೆಂದು ಹೇಳಿದಿರಿ. ನಾವು ಹೇಳಿದ್ದು ಏನೆಂದರೆ, ಪ್ರತಿಯೊಂದು ಫೀಲ್ಡ್‌ನಲ್ಲಿ ನಾವು ರಿಪೇಮೆಂಟ್ ಮಾಡುವ ಕೆಪ್ಯಾಸಿಟಿಗಿಂತ ಹೆಚ್ಚಿನ ರೀತಿಯಲ್ಲಿ ತಾವು ಲೋನ್ ತೆಗೆದುಕೊಳ್ಳುತ್ತಿದ್ದೀರಿ. ಮತ್ತು ಅದು ಅನೇಕ ಕಡೆ ದುರುಪಯೋಗವಾಗಿದೆ ಎನ್ನತಕ್ಕಂಥದ್ದು ; ಕರ್ನಾಟಕ ಸ್ಟೇಟ್ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ವತಿಯಿಂದ ನೇರವಾಗಿ ಗುತ್ತಿಗೆ ಕೊಡತಕ್ಕಂಥದ್ದು, ಅವರು 14 ಪರ್ಸೆಂಟ್ ಸಬ್ ಕಾಂಟ್ರ್ಯಾಕ್ಟ್ ತೆಗೆದುಕೊಳ್ಳುತ್ತೇವೆಂದು ಹೇಳುವುದು,

ಅಲ್ಲಿ ಕೆಲವು ಪರ್ಸೆಂಟೇಜ್‌ನಿಂದ ಕೆಲಸ ಮಾಡತಕ್ಕಂಥದ್ದು ಸಾಲ ತರುವುದು ಕೋಟಿಗಟ್ಟಲೆ ನಾವು ಈ ರೀತಿಯಾಗಿ ಖರ್ಚು ಮಾಡಿದರೆ ಅದು ಸಮರ್ಪಕವಾಗಿದೆ ಎಂದು ನಿಮ್ಮ ಮನಸ್ಸಿಗೆ ಅನ್ನಿಸಿದರೆ ನಾನು ಒಪ್ಪುತ್ತೇನೆ. ಕೋಟಿಗಟ್ಟಲೆ ನಾವು ಕೃಷ್ಣ ಜಲಭಾಗ್ಯ ನಿಗಮದಿಂದ ಹಣ ಸಂಗ್ರಹ ಮಾಡಿ ಮನಸ್ಸಿಗೆ ಬಂದಂತೆ ಕ್ಲೇಮ್ ಕೊಟ್ಟು, ನಾವು ಆ ಕಡೆ ವಿಚಾರವನ್ನೂ ಮಾಡದೇ ಹೋಗುವುದು. ಅದಕ್ಕೆ ನಾವು ಹೇಳಿದ್ದು, ಅದಕ್ಕೂ ಸಿಬಿಐ ಎನ್‌ಕ್ವೈರಿ ಮಾಡಿ, ವಿಸಿ ಛಾನಲ್‌ದು ಮಾಡಿ, ಬೈವಾಟರ್‌ದ್ದು ಏನೂ ಇಲ್ಲವೆಂದು ಹೇಳುತ್ತೀರಿ; ಹೌಸ್ ಕಮಿಟಿ ಮಾಡಿ ನಮಗೆ ಏನೂ ಇಲ್ಲವೆಂದು ಹೇಳಿದಾಗ ನೋಡೋಣ. ಈ ಸರ್ಕಾರದಿಂದ ಏನೇನು ಇದೆ, ಏನೇನು ಬರುತ್ತದೆ ನೋಡೋಣ. ಅದಕ್ಕೆ ಇವತ್ತು ಅನೇಕ ಮಾತುಗಳು ನಮ್ಮ ಮುಂದೆ ಇವೆ. ಅದಕ್ಕಾಗಿ ಲೋನ್ ತಾವು ತೆಗೆದುಕೊಳ್ಳುತ್ತಿದ್ದೀರಿ. ಇವತ್ತು ನಮ್ಮ ಅಸೆಟ್ಸ್‌ಗಿಂತಲೂ ಲಯಬಿಲಿಟೀಸ್ ಹೆಚ್ಚಿಗೆಯಾಗಿದೆ. ಅಸೆಟ್ಸ್ ಮತ್ತು ಲಯಾಬಿಲಿಟೀಸ್‌ನಲ್ಲಿ ಸುಮಾರು ಎರಡೂವರೆ ಸಾವಿರ ಕೋಟಿ ರೂಪಾಯಿಗಳ ವ್ಯತ್ಯಾಸ ಇದೆ. 13,000 ಕೋಟಿ ರೂಪಾಯಿಗಳ ಲೋನ್ ನಮ್ಮ ಸರ್ಕಾರದ್ದು. ಹಿಂದಿನವರು ಲೋನ್ ತೆಗೆದುಕೊಂಡಿಲ್ಲ. ಹಿಂದಿನವರು ಎಷ್ಟು ತಾಕತ್ತು ಇದೆ ಅಷ್ಟೇ ಲೋನ್ ತೆಗೆದುಕೊಂಡಿರುವುದು. ನೀವು ಲೋನ್ ಸಿಗುತ್ತದೆ ಅಂದ ತಕ್ಷಣ ನಬಾರ್ಡ್ ವರ್ಲ್ಡ್‌ಬ್ಯಾಂಕ್, ಕೃಷ್ಣ ಜಲಭಾಗ್ಯ ನಿಗಮ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಿಂದ ಹೀಗೆ ಯಾರ್ಯಾರು ಕೊಡುತ್ತಾರೆ ಅವರಿಂದ ಎಲ್ಲಾ ಸಾರಾಸಗಟಾಗಿ ತೆಗೆದುಕೊಳ್ಳುತ್ತಿದ್ದೀರಿ. ಮುಂದೆ ತೀರಿಸುವವರು ತೀರಿಸುತ್ತಾರೆ, ನಾವು ಏನು ಮಾಡಬೇಕಾಗಿದೆ ಎಂದು ತಿಳಿದುಕೊಂಡು ಸಾಲ ತಂದು ಹೋಳಿಗೆ ಊಟ ಕೊಡುತ್ತಿದ್ದೀರಿ. ಕೊನೆಯದಾಗಿ ಬೈವಾಟರ್ ಬಗ್ಗೆ ತಾವೇ ಉತ್ತರ ಕೊಟ್ಟಿರಿ. ಅಧ್ಯಕ್ಷರೆ, ತಮ್ಮ ಮುಖಾಂತರ ಇನ್‌ಸಿಸ್ಟ್ ಮಾಡುತ್ತೇನೆ, ಇದರಲ್ಲಿ ಟ್ರಾನ್ಸ್‌ಫರೆನ್ಸಿ ಇರಬೇಕು, ಅಥವಾ ಇಷ್ಟು ಅಂಶ ಕೂಡಿ ಹಾಕಬೇಕೆಂದರೆ, ಪತ್ರಿಕೆಗಳಲ್ಲೂ ಕೂಡ ಅನೇಕ ಸಾರಿ ಹೇಳಿಕೆಗಳು ಮತ್ತು ಲೇಖನಗಳು ಬಂದಿವೆ. ಮೇಲ್ಮನೆಯಲ್ಲಿ ಮತ್ತು ಈ ಮನೆಯಲ್ಲಿ ಅನೇಕ ಪ್ರಮುಖ ಸದಸ್ಯರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಸಂಶಯ ನಿವಾರಣೆಯಾಗಬೇಕೆಂದರೆ ನಾನು ಪುನಃ ಡಿಮ್ಯಾಂಡ್ ಮಾಡುತ್ತೇನೆ, ಇದಕ್ಕೆ ಹೌಸ್ ಕಮಿಟಿ ಮಾಡಿ, ಹೌಸ್ ಕಮಿಟಿ ಮುಂದೆ ಎಲ್ಲಾ ಕಾಗದ ಪತ್ರಗಳು ಬರಲಿ ಮತ್ತು ಹೇಳಿಕೆಗಳು ಕೂಡ ಬರಲಿ, ಇದರ ಸಂಬಂಧ ಏನಿದೆ, ಯಾರ್ಯಾರು ಎಷ್ಟು ಮಾಡಿದ್ದಾರೆ, ನಾವು ನಿಮಗೆ ನೇರವಾಗಿ ಹೇಳಲಿಲ್ಲ. ಆ ಮಂತ್ರಿಗಳು ನೀವು ಯಾವಾಗ ಭೇಟಿಯಾದಿರಿ, ನಮಗೆ ಇದು ಸಂಬಂಧವಿಲ್ಲ. ಮಂತ್ರಿಗಳದ್ದೂ ಸಂಬಂಧವಿಲ್ಲ, ಯಾವುದೂ ಸಂಬಂಧವಿಲ್ಲ. ನಮಗೆ ಸಂಬಂಧವಿರುವುದು, ಇಷ್ಟೊಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಒಂದು ಪ್ರಾಜೆಕ್ಟ್ ತರುವಾಗ ಅದು ಉಪಯುಕ್ತವಾಗಬೇಕು. ಜನರ ಮೇಲೆ ಭಾರವಾಗಬಾರದು.

1.20 ಪಿ.ಎಂ.

ಪುನಃ ನಾವು ಇಷ್ಟೊಂದು ಸಾಲವನ್ನು ಒಂದು ಕಂಪನಿಯಲ್ಲಿ ಮಾಡಿ ನೆಗೋಷಿಯೇಟ್ ಮಾಡುವ ಪ್ರಯತ್ನವೇನೊ ನಡೆದಿದೆ. ಇಂತಹ ಕಂಪನಿಯ ಜೊತೆ ನೆಗೋಷಿಯೇಟ್ ಮಾಡಿ ಎಂದು ತಾವೇ

ಹೇಳಿದ್ದಿರಿ. ಅಂದರೆ ಒಪ್ಪಂದವಾದಂತೆಯೇ. ಅದರ ಅರ್ಥವೇನೆಂದರೆ, you are intending to negotiate with only one company. That is the fact. You have not kept choice. ಅವರು, ಇವರು ಎಂದು ಐದಾರು ಕಂಪನಿಯವರನ್ನು ಕರೆದು ಎಲ್ಲಾ ಕಂಪನಿಯವರೊಡನೆ ನೆಗೋಷಿಯೇಟ್ ಮಾಡುವಂತಹ ಪ್ರಯತ್ನವಂತೂ ಇಲ್ಲ. ಒಂದೇ ಒಂದು ಕಂಪನಿಯೊಡನೆ ನೆಗೋಷಿಯೇಟ್ ಮಾಡುವಂತಹ ಅಪರಾಧ ಮಾಡಿದ್ದೀರಿ. ಅದಕ್ಕಾಗಿ ಈ ಸಂಶಯ ಬಂದಿದೆ, ಇದು ನಿವಾರಣೆಯಾಗಬೇಕೆಂದರೆ ತಾವು ಹೌಸ್ ಕಮಿಟಿಯನ್ನು ಮಾಡಿ, ತಾವು ಇಲ್ಲವೆಂದು ಹಟವಿಡಿದರೆ ಇದರಲ್ಲಿ ಏನೋ ಗೋಲ್‌ಮಾಲ್ ಇದೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಮತ್ತೆ ಇದಕ್ಕೆ ತಾವು ಒಪ್ಪದೆ ತಮ್ಮದೇ ಆದ ಧಾಟಿಯಲ್ಲಿ ಹೋಗಬೇಕಾದರೆ, ಇದರಲ್ಲಿ ಯಾವುದೋ ವೆಸ್ಟೆಡ್ ಇಂಟ್ರೆಸ್ಟ್ ಈ ಸರ್ಕಾರಕ್ಕೆ ಇದೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ.

+ **ಶ್ರೀ ಕೆ.ಎಸ್. ಈಶ್ವರಪ್ಪ** (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು, ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡಿದ ಅನೇಕ ವಾಸ್ತವಾಂಶಗಳ ಬಗ್ಗೆ ಗಮನಿಸಲಿಲ್ಲವೆಂದು ನಾನು ಭಾವಿಸುತ್ತೇನೆ. ಏಕೆಂದರೆ ನೇರವಾಗಿ ರಾಜ್ಯದ ಜನತೆಗೆ ಏನು ಕ್ರಿಯಾ ಯೋಜನೆಗಳ ಮೂಲಕ ಹಣವನ್ನು ಇಟ್ಟಿದ್ದರೊ ಆ ಹಣವೇ ಜನರಿಗೆ ಮುಟ್ಟಿಲ್ಲವೆನ್ನುವುದನ್ನು ನಾನು ಉದಾಹರಣೆಯ ಸಹಿತ ಬಹಳ ಸ್ಪಷ್ಟವಾಗಿ ಪ್ರಸ್ತಾಪ ಮಾಡಿದ್ದೆ. ಕರ್ನಾಟಕದ ಕೊಳಚೆ ನಿರ್ಮೂಲನ ಮಂಡಳಿಗೆ 1997-98, 1998-99ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಬಂದಂತಹ 25 ಕೋಟಿ ರೂಪಾಯಿಗಳಲ್ಲಿ ಇವತ್ತಿನವರೆಗೆ ಒಂದು ರೂಪಾಯಿಯನ್ನೂ ಕೂಡ ಆ ಮಂಡಳಿಗೆ ತಲುಪಿಸಲಿಲ್ಲ. ಈಗಲಾದರೂ ತಲುಪಿಸುತ್ತೀರಾ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಎರಡನೆಯದು ಕ್ರಿಯಾ ಯೋಜನೆಯಲ್ಲಿಯೇ ಹೆಚ್‌ಕೆಡಿಬಿ, ಮಲೆನಾಡು ಅಭಿವೃದ್ಧಿ ಮಂಡಳಿ ಹೀಗೆ ವಿವಿಧಮಂಡಳಿಗಳ ಮುಖಾಂತರ ಕ್ರಿಯಾ ಯೋಜನೆಯಲ್ಲಿ ಕೆಲಸಗಳಾಗಿ ಕಂಟ್ರಾಕ್ಟರ್‌ಗೆ ಹಣ ಪಾವತಿಯಾಗದೆ ಯಾವುದೇ ಅಭಿವೃದ್ಧಿ ಕಾರ್ಯಗಳು ಈ ರಾಜ್ಯದಲ್ಲಿ ಆಗುತ್ತಿಲ್ಲ. ಅದರ ಬಗ್ಗೆಯೂ ಕೂಡ ನಾನು ಪ್ರಸ್ತಾಪ ಮಾಡಿದ್ದೆ. ಕ್ರಿಯಾ ಯೋಜನೆಯಲ್ಲಿಟ್ಟಂತಹ ಹಣ, ಮೊನ್ನೆ ಮಲೆನಾಡು ಅಭಿವೃದ್ಧಿ ಮಂಡಳಿಯ ಬೋರ್ಡ್ ಕಮಿಟಿಯಲ್ಲೆ, ದಿನಾಂಕ 22 ನೇ ತಾರೀಖು ಚರ್ಚೆಯಾಗಿ, ಅದರ ಅಧ್ಯಕ್ಷರಾದ ಶ್ರೀಮತಿ ಸ್ವರ್ಣ ಪ್ರಭಾಕರ್‌ರವರೆ ಹತ್ತೊಂಭತ್ತು ಮುಕ್ಕಾಲು ಕೋಟಿ ರೂಪಾಯಿಗಳಷ್ಟು ಹಣ ಬಾಕಿ ಇದೆ, ನಾವೆಲ್ಲಾ ಮುಖ್ಯಮಂತ್ರಿಯ ಹತ್ತಿರ ಒಂದು ನಿಯೋಗ ಹೋಗೋಣವೆಂದು ಹೇಳಿದ್ದಾರೆ. ಹಾಗೆ ಹೆಚ್‌ಕೆಡಿಬಿ, ಬಯಲುಸೀಮೆ ಅಭಿವೃದ್ಧಿ ಮಂಡಳಿದು ಬಾಕಿ ಉಳಿದಿದೆ, ಕ್ರಿಯಾ ಯೋಜನೆಯಲ್ಲಿರುವ ಹಣವನ್ನಾದರೂ ತಕ್ಷಣ ಬಿಡುಗಡೆ ಮಾಡುತ್ತೀರಾ ಎಂದು ನಾನು ಪ್ರಸ್ತಾಪ ಮಾಡಿದ್ದೆ, ಅದರ ಬಗ್ಗೆ ಏನೂ ಉತ್ತರ ಕೊಟ್ಟಿಲ್ಲ. ಅದರ ಬಗ್ಗೆ, ಉತ್ತರ ಕೊಡುವ ಸಂದರ್ಭದಲ್ಲಿ ಅದನ್ನಾದರೂ ತಿಳಿಸಬೇಕು. ಅದೇ ರೀತಿ ಕೇಂದ್ರ ಸರ್ಕಾರಕ್ಕೆ ಅತಿವೃಷ್ಟಿಯ ಬಗ್ಗೆ 1074 ಕೋಟಿ ರೂಪಾಯಿಯಷ್ಟು ಬೇಡಿಕೆ ಇಟ್ಟಿದ್ದು, ಅದರಲ್ಲಿ ಕೇಂದ್ರ ಸರ್ಕಾರದಿಂದ 50 ಕೋಟಿ ರೂಪಾಯಿಗಳು ಬಂದಿದೆ, ರಾಜ್ಯ ಸರ್ಕಾರ ಇಟ್ಟಂಥ ಹಣ ಇದನ್ನು ಪೂರ್ಣ ಬಿಡುಗಡೆ ಮಾಡದೆ,

ತೊಗರಿ ಬೆಳೆ ಪರಿಹಾರ ಸೇರಿಸಿ ನೂರು ಕೋಟಿ ರೂಪಾಯಿಗಳನ್ನು ನಾವು ಖರ್ಚುಮಾಡಿದ್ದೇವೆ ಎನ್ನುವ ಮಾತನ್ನು ಹೇಳಿಕೊಂಡಿದ್ದೀರಿ. ಕೇಂದ್ರದಿಂದ ಬಿಡುಗಡೆಯಾದ ಹಾಗೂ ರಾಜ್ಯ ಸರ್ಕಾರ ಇಟ್ಟಂಥ ಹಣ ಅತಿವೃಷ್ಟಿಗೊಳಗಾದ ಜನರಿಗೆ ಏನು ಉಪಯೋಗವಾಗಬೇಕಾಗಿತ್ತೋ, ಅದನ್ನು ಉಪಯೋಗ ಮಾಡದೆ ನಿರ್ಲಕ್ಷ ಮಾಡಿದ್ದಾರೆ. ಈಗಲಾದರೂ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತೀರೆನ್ನುವ ಅಂಶವನ್ನು ಹೇಳಬೇಕು. ಇನ್ನು ರಸ್ತೆಗಳ ಬಗ್ಗೆ, ಎಲ್ಲಾ ವಿಧಾನಸಭೆ ಕ್ಷೇತ್ರಗಳಿಗೆ 45 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ರಾಜ್ಯದ ಎಲ್ಲಾ ರಸ್ತೆಗಳು ಇವತ್ತು ಗುಂಡಿಗಳಿಂದ ಕೂಡಿದೆ, ಸನ್ಮಾನ್ಯ ಸುರೇಶ್‌ಕುಮಾರ್‌ರವರು ಬೆಂಗಳೂರು ನಗರವು ಸೇರಿದಂತೆ ಆ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದರು. ಅವರು ವಿಧಾನಸಭೆಯ ಒಬ್ಬ ಒಳ್ಳೆಯ ಶಾಸಕರಾಗಿದ್ದಾರೆ ಅವರೂ ಕೂಡ ಈ ರೀತಿ ಪ್ರಸ್ತಾಪ ಮಾಡುವುದನ್ನು ನೋಡಿ ಬಹಳ ಆಶ್ಚರ್ಯವಾಗುತ್ತದೆ. ರಸ್ತೆ ಬಗ್ಗೆ ಆಗಲೂ ಪ್ರಸ್ತಾಪ ಮಾಡಿದರು, ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರವನ್ನು ಕೊಡಲಿಲ್ಲ. ಜೊತೆಗೆ ಇಡೀ ದೇಶಕ್ಕೆ ಕಾನೂನು ಸುವ್ಯವಸ್ಥೆಗೆ ನಮ್ಮ ರಾಜ್ಯ ಮಾದರಿಯಾಗಿದೆ ಎಂದು ಹೇಳಿದರು. ನಾನು ನಾಲ್ಕು ಅಂಶವನ್ನು ಪ್ರಸ್ತಾಪ ಮಾಡಿದ್ದೆ, ಒಂದು ಈ ಸರ್ಕಾರ ಪ್ರಾರಂಭದಲ್ಲಿ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಈ ವಿಧಾನಮಂಡಲದಲ್ಲಿ ಮೇಜು ಕುರ್ಚಿಯೆಲ್ಲಾ ಪುಡಿಪುಡಿಯಾಗಿದ್ದು, ಆ ಕುರಿತು ಕೋದಂಡರಾಮಯ್ಯ ವರದಿಯ ಬಗ್ಗೆ ನಾವೇನೂ ಮಾಡಲಾಗುವುದಿಲ್ಲವೆಂದು ಹೇಳಿದರು. ಅದರಿಂದ ಮುಂದೆ ನಾನು ತುಂಬಾ ನೊಂದು ಹೇಳಿದ್ದೆ, ನನಗೆ ಬಾಯಿಯಿಂದ ಹೇಳುವುದಕ್ಕೆ ಇಷ್ಟಪಡದಿದ್ದರೂ ಹೇಳಬೇಕಾಗಿದೆ, ಒಬ್ಬ ಮಂತ್ರಿಯನ್ನು ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಚಪ್ಪಲಿಯಲ್ಲೆಲ್ಲಾ ಹೊಡೆದರು, ಆ ರೀತಿ ಮಾಡಿದಂತಹವರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರೆಂದು ಕೇಳುವುದಕ್ಕೆ ನಾನು ಇಷ್ಟಪಟ್ಟೆ. ಪೋಲಿಸ್ ಅಧಿಕಾರಿಯಾದ ಸನ್ಮಾನ್ಯ ರೇವಣ್ಣಸಿದ್ದಯ್ಯನವರ ಎದುರಿಗೆ ನನಗೆ ರಕ್ಷಣೆ ಸಿಗಲಿಲ್ಲವೆಂದು ಮಾನ್ಯ ಸಿಂಧ್ಯಾರವರೇ ಹೇಳಿಕೆಯನ್ನು ನೊಂದು ಕೊಟ್ಟರು. ಅಂತಹ ವ್ಯಕ್ತಿಗಳ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರೆಂದು ಕೇಳಿದ್ದು, ಅದಕ್ಕೂ ಉತ್ತರವನ್ನು ಕೊಡಲಿಲ್ಲ. ಜೊತೆಗೆ ಕಾಂಗ್ರೆಸ್‌ನವರಂತಹ ಗುಂಪುಗಾರಿಕೆಯಿರುವ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿ ಬಸವೇಶ್ವರ ಫೋಟೋಗೆ ಚಪ್ಪಲಿ ಹಾರವನ್ನು ಹಾಕಿದ್ದರು ಎಂದು ನಾನು ಬಹಳ ನೊಂದು ಹೇಳಿದ್ದೆ, ಆ ರೀತಿ ಮಾಡಿದವರ ಬಗ್ಗೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ. ಏಕೆಂದರೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ ಎಂದು ಒಂದು ಮಾತನ್ನು ಹೇಳಿಕೊಂಡು ಹೋದರೆ ಆಗುವುದಿಲ್ಲ. ನಾನು ನಿರ್ದಿಷ್ಟವಾಗಿ ಘಟನೆಗಳನ್ನು ಪ್ರಸ್ತಾಪ ಮಾಡಿ ಹೇಳಿದ್ದೆ. ಸಿಂಧ್ಯಾರವರಿಗೆ ಈ ರೀತಿ ಚಪ್ಪಲಿ ಹಾರ, ಬಸವೇಶ್ವರ ಫೋಟೋಗೆ ಈ ರೀತಿ ಚಪ್ಪಲಿ ಹಾರ ಹಾಕಿದವರ ಬಗ್ಗೆ ತಾವೂ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಲಿಲ್ಲವೆಂದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿರ್ದಿಷ್ಟವಾದ ವ್ಯಕ್ತಿಯನ್ನು ಪ್ರಸ್ತಾಪ ಮಾಡದೆ ಕಾಂಗ್ರೆಸ್ ಪಕ್ಷದವರು ಹೋಗಿ ಮಾಡಿದರು ಎಂದು ಹೇಳುವುದು ಸರಿಯಲ್ಲ.

(ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ .ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ನಾನು ಖಂಡಿತಾ ಇಲ್ಲಿ ರಾಜಕಾರಣ ಮಾಡುವುದಕ್ಕೆ ಹೊರಟಿಲ್ಲ, ನಾನು ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಪ್ರಸ್ತಾಪ ಮಾಡಿದೆ. ಆ ಘಟನೆಯ ಬಗ್ಗೆ ಪತ್ರಿಕೆಯಲ್ಲಿ ಬಂದು, ಆ ರೀತಿ ಗುಂಪುಗಾರಿಕೆ ಇರುವ ಸಂದರ್ಭದಲ್ಲಿ ಈ ರೀತಿಯಾಗಿದೆ ಎಂದು ಹೇಳಿದೆ. ಬಸವೇಶ್ವರ ಫೋಟೋಗೆ ಚಪ್ಪಲಿ ಹಾರ ಹಾಕುವಲ್ಲಿ ಕಾಂಗ್ರೆಸ್‌ನವರ ಗುಂಪುಗಾರಿಕೆ ಇಲ್ಲವೆನ್ನುವುದನ್ನು ವಿರೋಧಪಕ್ಷದ ನಾಯಕರು ಹೇಳುವುದಕ್ಕಿಂತ ಮಾನ್ಯ ಮುಖ್ಯಮಂತ್ರಿಗಳು ಹೇಳಿಬಿಡಲಿ ನಾನು ಸಂತೋಷಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕಾಂಗ್ರೆಸ್‌ನವರು ಹಾಕಿದ್ದಾರೆ ಎಂದೆಲ್ಲಾ ಹೇಳುವುದು ಅತಿಯಾಯಿತು. ಇಂತಹ ಘಟನೆ ನಡೆಯುವುದಕ್ಕೆ ಯಾರು ಕಾರಣರೆನ್ನುವುದನ್ನು ಹೇಳಬೇಕು, ನಾಳೆ ಎಲ್ಲಿಯಾದರೂ ನಡೆದರೆ ನಿಮ್ಮ ಮೇಲೆ ಹೇಳುವುದಕ್ಕಾಗುತ್ತದೆಯೇ?

ಶ್ರೀ ಯು.ಆರ್. ಸಭಾಪತಿ : ನಿಮಗೆ ಪತ್ರಿಕೆಯಲ್ಲಿ ಬಂದದ್ದೇ ಪುರಾವೆಯೇ?

ಶ್ರೀ ಜಗದೀಶ್ ಶೆಟ್ಟರ್ : ಪತ್ರಿಕೆಯಲ್ಲಿ ಬಂದಿದೆ, ರಾಜ್ಯದ ಯುವಕಾಂಗ್ರೆಸ್‌ನ ಉಪಾಧ್ಯಕ್ಷರಾಗಿದ್ದ ಯುವ ಕಾಂಗ್ರೆಸ್‌ನ ನಾಯಕ ಅನಿಲ್‌ಕುಮಾರ್ ಪಾಟೀಲ್, ಆತನನ್ನು ಅಕ್ಯೂಸ್ಡ್ ಎಂದು ಮಾಡಿದ್ದಾರೆ, ಅವರ ಮೇಲೆ ಈಗಾಗಲೇ ಕೇಸ್ ಹಾಕಿದ್ದಾರೆ, ಈಗ ಕಾಂಗ್ರೆಸ್‌ನವರು ಅಲ್ಲವೆಂದು ಹೇಳಿದರೆ ಅದು ಬೇರೆ ಮಾತು. ಅದನ್ನು ಸ್ಪಷ್ಟಪಡಿಸಲಿ ಎಂದು ನಾವು ಕೇಳುತ್ತಿದ್ದೇವೆ.

ಮಾನ್ಯ ಸದಸ್ಯರು : ಬಸವೇಶ್ವರರಂತಹ ವ್ಯಕ್ತಿಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವ ದುರಂತ ರಾಜ್ಯದಲ್ಲಿ ನಡೆಯುತ್ತಿದೆ. ಯಾರು ಈ ಸಮಾಜವಾದವನ್ನು ದೇಶಕ್ಕೆ ಹೇಳಿದ ಮಹಾತ್ಮ ಬಸವೇಶ್ವರರ ಫೋಟೋಗೆ ಚಪ್ಪಲಿ ಹಾರ ಹಾಕುವಂತಹ ಘಟನೆ ನಡೆದಾಗಲೂ ಕೂಡ ಸರ್ಕಾರ ಏನು ಕ್ರಮ ಕೈಗೊಳ್ಳದಿದ್ದರೆ, ಇನ್ನೆಂತಹ ದುರಂತ ಈ ರಾಜ್ಯದಲ್ಲಿ ನಡೆಯಬೇಕು ಎಂದು ನಾನು ಕೇಳುತ್ತಿದ್ದೇನೆ.

ಮಾನ್ಯ ಸದಸ್ಯರು : ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡುತ್ತಾ ಒಂದು ವಿಷಯವನ್ನು ಹೇಳಿದರು, ಐಎಸ್‌ಐಯನ್ನು ನಿಯಂತ್ರಣಕ್ಕೆ ಇಟ್ಟಿದ್ದೇವೆ, ಎಲ್ಲಾ ರೀತಿಯ ಬಂಧನವನ್ನು ಹಾಕಿದ್ದೇವೆ ಮತ್ತು ಕೋಮುಗಲಭೆ ನಡೆಯುವುದನ್ನು ನಿಲ್ಲಿಸಿದ್ದೇವೆಂದು ಹೇಳಿದರು. 1993 ರಲ್ಲಿ ಭಟ್ಕಳದಲ್ಲಿ ನಡೆದ ಕೋಮುಗಲಭೆಯಲ್ಲಿ ಯಾರ್ಯಾರು ಭಾಗಿಯಾಗಿದ್ದರು, ಅದರಲ್ಲಿ ಸರ್ಕಾರದ ಪಾತ್ರ ಎಷ್ಟಿದೆ, ಐಎಸ್‌ಐ ಕೈವಾಡ ಯಾವ ರೀತಿ ಇದೆ, ಸರ್ಕಾರ ಅವರಿಗೆ ಯಾವರೀತಿ ರಕ್ಷಣೆಯನ್ನು ಕೊಟ್ಟಿತು, ಅಧಿಕಾರಿಗಳು ಹೇಗೆ ವಿಫಲರಾಗಿದ್ದರು ಎನ್ನುವುದನ್ನು ಸ್ಪಷ್ಟವಾಗಿ ಜಗನ್ನಾಥಶೆಟ್ಟಿಯವರ ವರದಿಯಲ್ಲಿ ಕೊಡಲಾಗಿದೆ. ವರದಿ ಕೊಟ್ಟು ಎರಡೂವರೆ ವರ್ಷವಾದರೂ ಅದನ್ನು ಮುಚ್ಚಿಟ್ಟುಕೊಂಡು ಕೋಮಗಲಭೆಯಲ್ಲಿ ಯಾರ್ಯಾರು ಭಾಗಿಗಳಾಗಿದ್ದರು ಅವರಿಗೆ ರಕ್ಷಣೆಯನ್ನು ಕೊಡುವ ಕೆಲಸವನ್ನು ಮಾಡಿದೆ, ಐಎಸ್‌ಐಗೆ ರಕ್ಷಣೆ ಕೊಡುವ ಕೆಲಸ ಮಾಡಿದೆ. ನಿಮಗೆ ಅವರ ಬಗ್ಗೆ ಸ್ಪಷ್ಟವಾದ ವಿರೋಧವಿದ್ದರೆ ಆ ವರದಿಯನ್ನು ಸದನದಲ್ಲಿ ಮಂಡಿಸಬೇಕು. ಈ ಬಗ್ಗೆ ಉತ್ತರವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕೆಂದು ಕೇಳಬಯಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಸನ್ಮಾನ್ಯ ಮುಖ್ಯಮಂತ್ರಿಗಳು, ಇಡೀ ದೇಶಕ್ಕೆ ಮಾದರಿಯಾಗಿ ಕಾನೂನು ಸುವ್ಯವಸ್ಥೆ ರಾಜ್ಯದಲ್ಲಿದೆ ಎಂದು ಹೇಳಿದರು. ಆ ಬಗ್ಗೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಪ್ರಸ್ತಾಪ ಮಾಡಿದ್ದೆ. ನ್ಯಾಷನಲ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಪೋಲಿಸ್‌ನವರ ಎದುರಿಗೆ ನನಗೆ ಚಪ್ಪಲಿಯಿಂದ ಹೊಡೆದರು ಎಂದು ಮಂತ್ರಿಗಳಾದ ಮಾನ್ಯ ಪಿ. ಜಿ. ಆರ್. ಸಿಂಧ್ಯಾರವರೇ ಬಹಳ ಸ್ಪಷ್ಟವಾಗಿ ಹೇಳಿದರು. ಇವತ್ತು ನಿಮ್ಮ ಬಗ್ಗೆ ರಾಜ್ಯದ ಜನತೆಗೆ ವಿಶ್ವಾಸ ಬರಬೇಕಾದರೆ ಅಂತಹವರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ? ಈ ರಾಜ್ಯದಲ್ಲಿ ಒಬ್ಬ ಮಂತ್ರಿಗೆ ಇವತ್ತು ರಕ್ಷಣೆ ಇಲ್ಲವೆಂದರೆ ಮತ್ಯಾರಿಗೆ ತಾವು ರಕ್ಷಣೆಯನ್ನು ಕೊಡುತ್ತೀರಿ? ಆದುದರಿಂದ, ಅಂತಹವರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರೆನ್ನುವುದನ್ನು ಸ್ಪಷ್ಟ ಮಾಡಬೇಕು.

ಅಧ್ಯಕ್ಷರು : ಮುಖ್ಯಮಂತ್ರಿಗಳು ಹೇಳುವುದು ಇರಲಿ, ನಾವು ವಿಧಾನಸಭೇಯಲ್ಲಿದ್ದು ಕಲಾಪ ನಡೆಸುತ್ತಿದ್ದೇವೆ. ಮಾತನಾಡದಿದ್ದರೆ ಒಂದು ಸಮಸ್ಯೆ; ಮಾತನಾಡಿದರೆ ಮತ್ತೊಂದು ಸಮಸ್ಯೆ. ಒಂದು ಸಾರ್ವಜನಿಕ ಸಭೆ, ಆ ಸಭೆಯಲ್ಲಿ ಅವರಿರುತ್ತಾರೆ, ಗದ್ದಲವಾದಾಗ ಯಾರೋ ಕಲ್ಲೋ, ಚಪ್ಪಲಿಯನ್ನೊ ಬಿಸಾಡುತ್ತಾರೆ, ಹೊಡೆಯುವುದೆಂದರೆ ನೇರವಾಗಿ ಮುಖಾಮುಖಿಯಾಗಿ ಹೊಡೆಯುವುದಾಗುತ್ತದೆ. ಏಕೆ ಅಷ್ಟೊಂದು ದೊಡ್ಡದು ಮಾತನಾಡುವುದಕ್ಕೆ ಹೋಗುತ್ತೀರಿ, ಕೇಸ್ ಬುಕ್ ಮಾಡಿರುತ್ತಾರೆ ವಿಚಾರಣೆ ನಡೆಯುತ್ತದೆ.

ಶ್ರೀ. ಅರಗಜ್ಞಾನೇಂದ್ರ : ಹಾಗಾದರೆ ಹುಬ್ಬಳ್ಳಿಯಲ್ಲಿ ನಡೆದ ಘಟನೆ ಕೂಡ ಎಕ್ಸೆಪ್‌ಶನ್ ಎಂದು ಹೇಳುತ್ತೀರಾ ?

ಅಧ್ಯಕ್ಷರು : ಅರಗಜ್ಞಾನೇಂದ್ರರವರೇ, ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು, ನೀವೇ ಸಾರ್ವಜನಿಕ ಸಭೆಗೆ ಹೋದಾಗ ಯಾರೋ ಕಲ್ಲೊ ಏನನ್ನೊ ಬಿಸಾಡುತ್ತಾರೆ, ಆಗ ಕಲ್ಲಿನಲ್ಲಿ ಹೊಡೆದರು ಎಂದಾಗುವುದಿಲ್ಲ, ಬಿಸಾಡಿದರು ಎಂದಾಗುತ್ತದೆ, ಆ ರೀತಿ ಮಾಡಿದವರು ಹೇಡಿಗಳು. ನೇರವಾಗಿ ನಿಮ್ಮೊಡನೆ ಮುಖಾಮುಖಿ ಸಂಘರ್ಷ ಮಾಡುವುದು ಬೇರೆ. ಅದು ಸಾಂದರ್ಭಿಕವಾಗಿ ಹೇಗೆ ಒಂದು ವಿಚಾರವನ್ನು ಹೇಳುತ್ತೇವೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ನಿಮ್ಮ ವಿವೇಚನೆಗೆ ಬಿಡುತ್ತೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಅದನ್ನು ಡಿಫೆಂಡ್ ಮಾಡತಕ್ಕಂಥದ್ದಲ್ಲ.

ಅಧ್ಯಕ್ಷರು : ನಾನು ಯಾರನ್ನೂ ಡಿಫೆಂಡ್ ಮಾಡುತ್ತಿಲ್ಲ, ಹೇಳುವಾಗ ಒಂದು ಸರಿಯಾಗಿ ಹೇಳಬೇಕು. ಈಶ್ವರಪ್ಪನವರೇ, ತಾವು ಹೇಳಿ.

ಶ್ರೀ. ಕೆ. ಎಸ್. ಈಶ್ವರಪ್ಪ : ನಾನು ಏನು ಹೇಳಲು ಬಯಸಿದೆ ಎಂದರೆ, ಅಧ್ಯಕ್ಷರೆ, ಇದನ್ನು ನಾನು ಮಾಡಿದ ಆಪಾದನೆಯಲ್ಲ, ಸ್ವತಃ ಮಂತ್ರಿಗಳು ಹೇಳಿದ ಅಂಶವನ್ನು ನಿಮ್ಮ ಹಾಗೂ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅವರು, ನನಗೆ ಪೋಲೀಸ್ ಅಧಿಕಾರಿಗಳ ಎದುರಿಗೆ ರಕ್ಷಣೆ ಸಿಗಲಿಲ್ಲವೆಂದು ಮಂತ್ರಿಗಳು ಹೇಳಿದ್ದು, ಅವರು ಗಲಾಟೆಯಾಗಲಿಲ್ಲ, ಯಾರೋ ರಸ್ತೆಯಲ್ಲಿ ಹೋಗುವವರು ಎಸೆದರು ಹೊಡೆತ ಬಿದ್ದಿದೆ, ಅದಕ್ಕೆ ಸಂಬಂಧವಿಲ್ಲವೆಂದು ಅವರು ಹೇಳಿಬಿಟ್ಟಿದ್ದರೆ ಸರಿಹೋಗುತ್ತಿತ್ತು, ನಾನು

ಆ ಹೇಳಿಕೆಯನ್ನು ಅವರಿಂದ ನಿರೀಕ್ಷೆ ಮಾಡಿದ್ದೆ; ಅವರು ಉತ್ತರ ಹೇಳುವಾಗ ಈ ಎರಡು ಅಂಶಗಳ ಬಗ್ಗೆ ಸ್ಪಷ್ಟ ಮಾಡಬೇಕು. ಇಡೀ ರಾಜ್ಯದ ಜನ ಬಸವೇಶ್ವರ ಫೋಟೋಗೆ ಚಪ್ಪಲಿ ಬಿದ್ದಿದ್ದನ್ನು ನೋಡುತ್ತಿದ್ದಾರೆ, ಸಿಂಧ್ಯಾರಂತಹವರಿಗೆ ಚಪ್ಪಲಿ ಏಟು ಬಿದ್ದು ಸ್ವತಃ ಅವರೇ ನನಗೆ ರಕ್ಷಣೆ ಸಿಗಲಿಲ್ಲವೆಂದು ಹೇಳಿಕೊಂಡಿದ್ದಾರೆ. ಈ ಎರಡು ಅಂಶಗಳ ಕುರಿತು ಅವರು ಸ್ಪಷ್ಟ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಭ್ರಷ್ಟಾಚಾರದ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿ, ಇದಕ್ಕೊಂದು ಹೋರಾಟ ಮಾಡಿ ಸದನದ ಸಮಿತಿಯಾಗಬೇಕೆಂದು ಒಂದು ತೀರ್ಮಾನ ಮಾಡಿ ತಾವೇ ಒಂದು ಸದನ ಸಮಿತಿಯನ್ನು ರಚನೆ ಮಾಡಿ, ಆ ಸದನ ಸಮಿತಿಗಳು ಕೊಟ್ಟಂತಹ ವರದಿಗಳನ್ನು ಆಧರಿಸಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಹೇಳಿದಾಗಲೂ ಕೂಡ ಏನೂ ಕ್ರಮ ಕೈಗೊಂಡಿಲ್ಲ. ಒಂದು ಮೈಸೂರು ಪೇಪರ್ ಮಿಲ್‌ನಲ್ಲಿ ಆಗಿರುವ ಅವ್ಯವಹಾರ, ಎರಡನೆಯದು ಪಶು ಔಷಧಿ ಖರೀದಿಯಲ್ಲಾಗಿರುವ ಅವ್ಯವಹಾರ ಇವುಗಳ ಬಗ್ಗೆ ನಾನು ನೇರವಾಗಿ ಪ್ರಸ್ತಾಪ ಮಾಡಿದ್ದೆ. ಈ ಎರಡು ವಿಷಯಗಳ ಬಗ್ಗೆಯು ವರದಿ ಬಂದಿದೆ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತಿರೋ ಇಲ್ಲವೋ ಎನ್ನುವುದನ್ನು ನಾನು ಪ್ರಸ್ತಾಪ ಮಾಡಿದ್ದೆ. ಅವರು ಹೇಳಿದರು ಎನ್‌ಕ್ವೈರಿ ನಡೆಯಲಿ, ನಾವ್ಯಾರೂ ಕೋರ್ಟಿಗೆ ಹೋಗಿಲ್ಲ ಎಂದು ಹೇಳಿದರು. ತಾವೇ ಸದನ ಸಮಿತಿಯನ್ನು ನೇಮಕ ಮಾಡಿದಿರಿ, ಆ ಎರಡು ಸದನ ಸಮಿತಿಗಳ ವರದಿಗಳು ಏನು ಬಂದಿದೆ ಅದರ ಬಗ್ಗೆ ಈಗಲಾದರೂ ಕ್ರಮ ಕೈಗೊಳ್ಳುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಅರಗಜ್ಞಾನೇಂದ್ರ : ನಿನ್ನೆ ಭದ್ರಾವತಿ ಪೇಪರ್ ಮಿಲ್‌ಗೆ ಬೆಂಕಿ ಬಿದ್ದು ಸಾಕಷ್ಟು ದೊಡ್ಡ ನಷ್ಟ ಅನುಭವಿಸಿದೆ, ಇದರ ಪರಿಣಾಮವನ್ನು ನಾವು ಎದುರಿಸುತ್ತಿದ್ದೇವೆ, ಮುಂದುವರಿಯುತ್ತಲೇ ಇದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಅನೇಕ ವಿಚಾರಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದ್ದೆ. ಅವು ಕಾವೇರಿ ವಿಚಾರದಲ್ಲಿ, ಅನೇಕ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದರ ಬಗ್ಗೆ ಅಭಿನಂದನೆಯನ್ನು ಸಲ್ಲಿಸಿದ್ದೆ. ಅದರ ಜೊತೆಗೆ ಪ್ರಸ್ತಾಪ ಮಾಡಿ ಭಟ್ಕಳದ ಕೋಮುಗಲಭೆ ಉಂಟಾದಾಗ ಆಗಿನ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ನೇರವಾಗಿ ಹೇಳಿದ್ದರು. ಬಿಜೆಪಿ ಹಾಗೂ ನಮ್ಮ ಸಂಘಟನೆಗಳ ಬಗ್ಗೆ ಆಪಾದನೆ ಮಾಡಿದಾಗ, ಸುಮ್ಮನೆ ಆಪಾದನೆಗಳನ್ನು ಮಾಡಬೇಡಿ, ತನಿಖೆ ಮಾಡಲು ತನಿಖಾ ಆಯೋಗವನ್ನು ಮಾಡಬೇಕೆಂದು ನಾವೇ ಹೇಳಿದ್ದೆವು. ಆಗ ನ್ಯಾಯಮೂರ್ತಿ ಜಗನ್ನಾಥಶೆಟ್ಟಿಯವರನ್ನು ನೇಮಕ ಮಾಡಿದ್ದರು. ಅವರ ವರದಿ ಬಂದಿದೆ. ವರದಿ ಬಂದ ಸಂದರ್ಭದಲ್ಲಿ ಯಾರು ತಪ್ಪಿತಸ್ಥರು ಎನ್ನುವುದನ್ನು ನಮ್ಮ ಸರ್ಕಾರ ಸ್ಪಷ್ಟಪಡಿಸಲಿಲ್ಲವೆಂದರೆ ಈ ರೀತಿ ರಾಜ್ಯದಲ್ಲಿ ಕೋಮುಗಲಭೆಯನ್ನು ಹರಡಿ ಅಹಿಂಸೆಗೆ ಕಾರಣರಾದ ವ್ಯಕ್ತಿಗಳು ಮತ್ತೆ ತಮ್ಮ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಅವರಿಗೆ ಯಾವುದೇ ಭಯವಿಲ್ಲ. ಐಎಸ್‌ಐ ಚಟುವಟಿಕೆ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ, ಈ ಎಲ್ಲಾ ಅಂಶಗಳ ಬಗ್ಗೆ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಆಯವ್ಯಯದ ಕೊನೆಯದಿನ ಇವತ್ತು, ಈ ಒಂದು ಐದು ವರ್ಷದ ಕೊನೆಯ ದಿನ. ಸಾಮಾನ್ಯ ಚರ್ಚೆಯಾದ ಮೇಲೆ ಅದರ ಗಾಂಭೀರ್ಯತೆ ಹೊರಟುಹೋಯಿತು. ಹಳ್ಳಿಯಲ್ಲಿ ಒಂದು ಗಾದೆ ಇದ್ದಂತೆ, ಹಬ್ಬಕ್ಕಿಂತ ಮುಂಚೆಯಾಗುವ ಸಂತೆ ಬಹಳ ಚೆನ್ನಾಗಿರುವ ಸಂತೆ, ಒಳ್ಳೆಯ ವ್ಯಾಪಾರವಾಗುತ್ತದೆ. ಹಬ್ಬವಾದ ಮೇಲೆ ಆಗುವುದು ಮೈಲಿಗೆ ಸಂತೆ. ಜೂನ್ ತಿಂಗಳಲ್ಲಿ ಮತ್ತೆ ಅಧಿವೇಶನ ಸೇರತಕ್ಕಂಥದ್ದು ವಂದನಾರ್ಪಣೆ ಇದ್ದಂತೆ, ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ನಾನು ಇವತ್ತು ಬಹಳ ನಿರಾಶನಾದೆ. ಮುಖ್ಯಮಂತ್ರಿಗಳು ಬಹಳ ಪುಸ್ತಕಗಳನ್ನು ತಂದಿದ್ದಾರೆ, ಯಾವುದಾದರೂ ಕವಿತೆಯನ್ನು ಹೇಳುತ್ತಾರೆ. ಅವರ ಭಾಷಣ ಇವತ್ತು ಸ್ವಾರಸ್ಯವಾಗಿರುತ್ತದೆ, ಚೆನ್ನಾಗಿರುತ್ತದೆ, ಮುಖ್ಯಮಂತ್ರಿಗಳ ಭಾಷಣ ನಾಳೆ ಬರುತ್ತದೆಂದು ದಿನ ತಳ್ಳುತ್ತಿದ್ದೆ. ಭಾಷಣ ತುಂಬಾ ಚೆನ್ನಾಗಿರುತ್ತದೆ ಎಂದು ಚಾಮರಾಜನಗರಕ್ಕೆ ಹೋಗಿ ನಾನು ರಾತ್ರಿ ಮೂರುಗಂಟೆಗೆ ವಾಪಸ್ ಬಂದೆ. ಇವತ್ತು ತಾವು ಏನೋ ನಿರಾಶರಾಗಿ ಕುಳಿತುಕೊಂಡಿದ್ದು ಮನಸ್ಸಿನಲ್ಲಿ ಏನೋ ಗೊಂದಲವಿದ್ದಂತೆ ಕಾಣುತ್ತದೆ. ಸಾಮಾನ್ಯವಾಗಿ ತಾವು ಹಾಗೆ ಸುಮ್ಮನೆ ಕುಳಿತುಕೊಳ್ಳುವವರಲ್ಲ. ನನಗನಿಸಿದಂತೆ ಇಡೀ ದೇಶದಲ್ಲೇ ಒಬ್ಬ ಮೇಧಾವಿ ಮುಖ್ಯಮಂತ್ರಿ ಎನ್ನುವುದರ ಬಗ್ಗೆ ಎರಡನೆ ಅಭಿಪ್ರಾಯವಿಲ್ಲ ಎನ್ನುವ ಮಾತನ್ನು ಅನೇಕ ಕಡೆ ಹೇಳುತ್ತೇನೆ, ಎಲ್ಲಿ ಬೇಕಾದರೂ ಹೇಳುತ್ತೇನೆ. ಆ ರೀತಿ ನಿಮಗೇನಾದರೂ ಪ್ರಶಸ್ತಿಯನ್ನು ಕೊಡಬೇಕಾದರೆ ಈ ದೇಶದ ವ್ಯಕ್ತಿ ಎಂದು ಕೊಡಲೇ ಬೇಕಾಗುತ್ತದೆ. ಯಾರು ಏನೇ ಹೇಳಲಿ ನಿಮ್ಮ ವಿದ್ವತ್ತು, ನಿಮ್ಮ ಮೆರಗನ್ನು ಯಾರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ ಇವತ್ತು, ನಗಿಸುವಂತಹ ಮಾಧುರ್ಯ, ಕವಿತೆ ಹೇಳತಕ್ಕಂಥದ್ದೆಲ್ಲಾ ಬರಲಿಲ್ಲ, ನಿಮ್ಮ ಮನಸ್ಸಿನಲ್ಲಿ ಏನೋ ಗೊಂದಲದಲ್ಲಿದ್ದಿರೆಂದು ನನಗನಿಸುತ್ತದೆ; ನಾನು ಅವತ್ತೇ ಹೇಳಿದಂತೆ ನೀವು ಯಾವ ಗೊಂದಲಕ್ಕೂ ಸಿಗುವಂತಹವರಲ್ಲ, ಆಕಾಶ ಕೆಳಗೆ ಬಿದ್ದರೂ ನೀವೇನು ಅದಕ್ಕೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇವತ್ತು ಏಕೆ ತಾವು ಈ ರೀತಿ ಇದ್ದೀರಿ ಎನ್ನುವ ಮಾತನ್ನು ತಮಗೆ ಹೇಳುತ್ತೇನೆ. ಈ ಶಾಸಕರ ಅನುದಾನದ ಬಗ್ಗೆ ಅನೇಕ ಬಾರಿ ವೈಯಕ್ತಿಕವಾಗಿ ಕಂಡು ತಮಗೆ ಹೇಳಿದ್ದೇನೆ. ಜೆ. ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ, ನಿಮ್ಮ ಕಾಲದಲ್ಲಿ, ಈ ಸಭೆಯ ಶಾಸಕರಿಗೆ ಅವರದೇ ವಿವೇಚನೆ ಅನುದಾನವಾಗಿ ಕನಿಷ್ಟ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಆ ಕೆಲಸ ನಿಮ್ಮ ಕಾಲದಲ್ಲಿ ಆಯಿತು ಎನ್ನುವ ಕೀರ್ತಿ ನಿಮಗೆ ಬರಲಿ ಎನ್ನುವ ಉದ್ದೇಶದಿಂದ ನಾನು ತಮ್ಮನ್ನು ಒತ್ತಾಯ ಮಾಡಿದೆ. ಅದರ ಬಗ್ಗೆ ತಾವು ಉತ್ತರ ಕೊಡಲಿಲ್ಲ, ಯಾವ ರೀತಿ ಉತ್ತರ ಕೊಡುತ್ತೀರೋ ಕೊಡಿ. ಎಲ್ಲಾ ಶಾಸಕರಿಗಲ್ಲದೆ, ಮಂತ್ರಿಗಳಿಗೂ ಇದು ಬೇಕಾಗಿದೆ, ಮುಂದೆ ಅವರು ಮಾಜಿಯಾಗಬಹುದು, ಶಾಸಕರಾಗಬಹುದು. ನೀವು ಒಂದೇ ರೂಪಾಯಿಯನ್ನಾದರೂ ನೀವು ಹಾಗೂ ಉಪ ಮುಖ್ಯಮಂತ್ರಿಗಳು ಸೇರಿ ತೀರ್ಮಾನಕ್ಕೆ ಬಂದು ಶಾಸಕರಿಗೆ ಕೊಡುವುದು ನಮ್ಮ ಕಾಲದಲ್ಲಿ ಆರಂಭವಾಗಿದೆ ಎನ್ನುವ ಪ್ರಕಟಣೆಯನ್ನು ಮಾಡಬೇಕು. ತಾವು ಈ ಆಸ್ಪತ್ರೆಗಳ ಕುರಿತು ನಾವು ಬಹಳ ಕೆಲಸವನ್ನು ಮಾಡಿದ್ದೇವೆಂದು ಹೇಳಿದಿರಿ, ನನ್ನ ಕ್ಷೇತ್ರದಲ್ಲಿ ಒಂದು ಜಿಲ್ಲಾ ಆಸ್ಪತ್ರೆ ಇದೆ. ಚಾಮರಾಜನಗರದ ಜಿಲ್ಲಾ ಆಸ್ಪತ್ರೆ ನರಕ ದರ್ಶನ ಅಲ್ಲಿ ಪ್ರಾಣಿಗಳು ಓಡಾಡುವುದಕ್ಕಾಗುವುದಿಲ್ಲ. 'ಡಿ' ದರ್ಜೆ ನೌಕರರ ಕೊರತೆ, ಕೆಟ್ಟ ಹಾಸಿಗೆಗಳು, ಔಷಧಿ ಇಲ್ಲ ಮತ್ತು ನೈರ್ಮಲ್ಯವಿಲ್ಲ, 30 ಮಂದಿ

ಸ್ಟಾಫ್ ನರ್ಸ್‌ಗಳ ಪೈಕಿ ಇರುವವರು ಏಳು ಮಂದಿ, ವೈದ್ಯರು ಮಾತ್ರ ತೀರಾ ಕಡಿಮೆ, ಜನರೇಟರ್ ಇಲ್ಲವೇ ಇಲ್ಲ, ಸುಸಜ್ಜಿತ ಶಸ್ತ್ರಚಿಕಿತ್ಸೆ ಕೊಠಡಿಯಂತೂ ಇಲ್ಲವೇ ಇಲ್ಲ; ಹಾಸಿಗೆಗಳ ಕೊರತೆಯಿಂದ ನೆಲದ ಮೇಲೆ ಮಲಗುವುದು, ಬೇರುಬಿಟ್ಟ ನೌಕರರ ಕಿರುಕುಳ, ಹುಚ್ಚು ನಾಯಿಕಡಿತಕ್ಕೆ ಔಷಧಿ ಇಲ್ಲವೇ ಇಲ್ಲ, ಇದು ಒಂದು ಜಿಲ್ಲಾ ಆಸ್ಪತ್ರೆಯ ದರ್ಶನ. ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ, ಅದು ಗಡಿ ಪ್ರದೇಶದಲ್ಲಿರುವ ಜಿಲ್ಲಾ ಆಸ್ಪತ್ರೆಯ ಗತಿ ಈ ರೀತಿಯಾದರೆ ಇಡೀ ರಾಜ್ಯದ ಆಸ್ಪತ್ರೆಗಳ ಪರಿಸ್ಥಿತಿಯೇನು? ಆದುದರಿಂದ, ತಾವು ರಾಷ್ಟ್ರದ ಅತ್ಯುತ್ತಮ ಕವಿಯಾದ ನಿಸಾರ್ ಅಹಮ್ಮದ್‌ರವರ ಒಂದು ಕವಿತೆಯನ್ನು ಓದಬಹುದಿತ್ತು. ಅದರಲ್ಲೂ, ಕುರಿಗಳು ಸಾರ್ ನಾವು ಕುರಿಗಳು ಎಂಬ ಕವಿತೆ ಬಹಳ ಆಪ್ಯಾಯಮಾನವಾಗಿ ಓದತಕ್ಕಂಥದ್ದು. ಯಾವುದೇ ಸರ್ಕಾರ ಬಂದರೂ ಜನರನ್ನು ಕುರಿಗಳಾಗಿ ಮಾಡಿದ್ದಾರೆಯೇ ಹೊರತು, ಜನರು ಮೇಲೆ ಬರುವುದಕ್ಕೆ ಸಾಧ್ಯ ಇಲ್ಲವೆನ್ನುವ ಮಾತನ್ನು ಅವರು ಎಷ್ಟು ಚೆನ್ನಾಗಿ ಕವಿತೆಯಲ್ಲಿ ಹೇಳಿದ್ದಾರೆ; ಅಂತಹ ಅನೇಕ ಪುಸ್ತಕಗಳನ್ನು ತಾವು ಓದಿದ್ದೀರಿ, ತಮ್ಮ ಮನಸ್ಸಿನಲ್ಲಿದೆ, ಅವೆಲ್ಲವನ್ನೂ ಇವತ್ತು ಸದನದ ಮುಂದೆ ಹೇಳುತ್ತೀರೆಂದು ಕಾತುರರಾಗಿದ್ದೆವು. ಇವತ್ತು ನಿಮ್ಮ ಉತ್ತರಕ್ಕಿಂತ ವೈಭವೀಕರಣವಾದ ಆ ನಿಮ್ಮ ಸಾಹಿತ್ಯವನ್ನೆಲ್ಲಾ ತಾವು ಸಭೆಯಲ್ಲಿ ಮಂಡಿಸುತ್ತೀರೆಂದು ನಾನು ಬಹಳ ಆಸೆಯನ್ನಿಟ್ಟುಕೊಂಡಿದ್ದೆ, ಆ ಆಸೆ ಮತ್ತೊಂದು ಸಾರಿ ಈಡೇರಲಿ ಎಂದು ಹೇಳಿ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಕುರಿಗಳು ಸಾರ್, ನಾವು ಕುರಿಗಳು ಎಂದು ಆ ಕವಿ, ಸಾಮಾನ್ಯ ಜನ ನಾಯಕರುಗಳ ಬಗ್ಗೆ ಇಟ್ಟುಕೊಂಡಿರುವ ಅಸಹ್ಯದ ಭಾವನೆಯನ್ನು ವ್ಯಕ್ತಪಡಿಸಲು ಹೇಳಿದ್ದಾರೆ. ಹಿಂದೆ ಒಂದು ಸಾರಿ ಆ ಕಡೆ ಇದ್ದಾಗ, ಇಲ್ಲಿ ಪಶುಸಂಗೋಪನಾ ಮಂತ್ರಿಗಳಿದ್ದರು. ಅವರಿಗೆ ಯಾರೋ ಒಬ್ಬರು ಈ ರಾಜ್ಯದಲ್ಲಿ ಕುರಿಗಳು ಎಷ್ಟಿದ್ದಾವೆಂದು ಪ್ರಶ್ನೆಯನ್ನು ಕೇಳಿದರು. ಅದಕ್ಕೆ ಉತ್ತರವಾಗಿ ಇಪ್ಪತ್ತು ಲಕ್ಷದ ಮೂವತ್ತಾರು ಸಾವಿರದ ಮುನ್ನೂರು ಎಂದು ಹೇಳಿದರು, ಆಗ ನಾನು ನಿಮ್ಮ ಹಿಂದಿರುವವರನ್ನು ಸೇರಿಸಿಕೊಂಡಿದ್ದೀರಾ ಎಂದು ಹೇಳಿದೆ. ಆಗ ಅವರಿಗೆ ಸಿಟ್ಟು ಬಂತು. ನೀವು ಹೇಳಿದಂತೆ ಆಯವ್ಯಯ ಅಂಕಿಅಂಶಗಳು ಬಂದರೆ punch of the speech ಇರುವುದಿಲ್ಲ. ಏಕೆಂದರೆ ಎಲ್ಲಾ ವಿಷಯಗಳಲ್ಲಿ ನಾವು ಮಾಡಿರುವ ಕಾರ್ಯಕ್ರಮಗಳು, ನಮ್ಮ ಖರ್ಚು ಮಾಡಿರುವ ಹಣ ಈ ಎಲ್ಲಾ ವಿವರಗಳು ಗೊತ್ತಾಗುತ್ತದೆ. ಪುನಃ ಅದನ್ನು ಬಳಸುವುದು ಸರಿಯಲ್ಲವೆಂದು ಹಾಗೆ ಇದ್ದೆ. ಮಾನ್ಯ ಅಧ್ಯಕ್ಷರೆ ಇಂಡಿವಿಜ್ಯುಯಲ್ ಘಟನೆ ಏನಾಯಿತು ಎನ್ನುವುದನ್ನು ಡಿಮಾಂಡ್ಸ್ ಮೇಲೆ ಕೇಳಬೇಕು. ಈಗ ನಾನು ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯಕ್ಕೆ ಬೆಂಬಲಿಸಿ ಸಾಮಾನ್ಯವಾಗಿ ಮಾತಾನಾಡಿದ್ದು, ಇದರಲ್ಲಿ ಯಾವ ವಿಷಯವನ್ನಾದರೂ ಮಾತನಾಡಬಹುದು. ಬಜೆಟ್ ಪಾಸ್ ಮಾಡುವಾಗಲಾದರೂ ಮಾತನಾಡಬಹುದು, ರಾಜ್ಯಪಾಲರ ಭಾಷಣದ ಮೇಲಾದರೂ ಮಾತನಾಡಬಹುದು. ಆದರೆ ವಿವರಗಳನ್ನು ಈ ಊರಿನಲ್ಲಿ ಹಾಗಾಯಿತು. ಆ ಊರಿನಲ್ಲಿ ಹಾಗಾಯಿತು. ಬೆಂಕಿ ಬಿತ್ತು ಎಂದು ಕೇಳಿದರೆ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನು ಕೇಳಲಿಲ್ಲ. ಪ್ರತಿನಿತ್ಯ ಆಗತಕ್ಕಂಥ ತಮ್ಮ ಭಾಷಣದ

ಸ್ವಾರಸ್ಯ ಇವತ್ತು ಆಗಲಿಲ್ಲ, ಅದು ಸ್ಪಷ್ಟವಾಗಿದೆ. ಶಾಸಕರ ಅನುದಾನದ ಬಗ್ಗೆ ತಾವು ಹೇಳಬೇಕು. ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠ ಬೇಕು ಎಂದು ಅಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ. ಈ ಬಗ್ಗೆ ಸರ್ಕಾರದ ನಿರ್ಧಾರವೇನು ಎನ್ನುವುದನ್ನು ತಾವು ತಮ್ಮ ಉತ್ತರದಲ್ಲಿ ಹೇಳಬೇಕು ಎಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ಡಿ. ಬಸವರಾಜು : ಸನ್ಮಾನ್ಯ ಸಭಾಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಎಂದು ಮುಖ್ಯ ಮಂತ್ರಿಯವರು ಈ ಸದನಕ್ಕೆ ಹೇಳಿದರು. ಒಂದು ವಿಚಾರವನ್ನು ತಮ್ಮ ಮೂಲಕ ನಾನು ಅವರಿಗೆ ಹೇಳಲು ಇಚ್ಛೆಪಡುತ್ತೇನೆ. ಏಕೆ ಆ ಇಲಾಖೆಯವರು ತಪ್ಪು ಮಾಹಿತಿಯನ್ನು ಮುಖ್ಯ ಮಂತ್ರಿಗಳಿಗೆ ಕೊಟ್ಟರೋ ನನಗೆ ಗೊತ್ತಾಗುತ್ತಿಲ್ಲ. ಏಕೆಂದರೆ ಇಲ್ಲಿ ತಪ್ಪು ಮಾಹಿತಿಯನ್ನು ಅವರು ಸ್ಪಷ್ಟಪಡಿಸಿದ್ದಾರೆ. ಆ ಮಾಹಿತಿಯನ್ನು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ ಕೇಳಿ. ನನ್ನ ಮಾತು ಕೇಳಿದರೆ ನಿಮಗೆ ಸಹಾಯವಾಗುತ್ತದೆ. ಬಹಳ ಜನರಿಗೆ ನಾನು ಅನೇಕ ಸಲ ಹೇಳಲು ಪ್ರಯತ್ನಪಟ್ಟೆ. ಬಜೆಟ್ ಮೇಲೆ ಜನರಲ್ ಡಿಸ್ಕಷನ್ ಆಯಿತು. ಬಜೆಟ್ ಜನರಲ್ ಡಿಸ್ಕಷನ್ ಆದ ಮೇಲೆ ಬಜೆಟ್ಟನ್ನು ಪಾಸ್ ಮಾಡಿ ಕೊಟ್ಟಿದ್ದೀರಿ. ರಾಜ್ಯಪಾಲರ ಭಾಷಣಕ್ಕೆ ಈ ಸಭೆ ವಂದನೆಯನ್ನು ಸಲ್ಲಿಸಬೇಕು. ಆ ಕೆಲಸವನ್ನು ಅವರು ಮುಗಿಸಿದ್ದಾರೆ. ಅದರ ಮೇಲೆ ಚರ್ಚೆಯಾಗಿದೆ, ಅದನ್ನು ಪಾಲಿಸಿದ್ದಾರೆ. ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಅವರ ನಿಲುವು ಏನು ಎನ್ನುವುದನ್ನು ಸಾದರಪಡಿಸಿ ಸವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಮತ್ತೆ ನಾವು ಮೇ ಅಥವಾ ಜೂನ್ ತಿಂಗಳಲ್ಲಿ ಮತ್ತೆ ಸಭೆ ಸೇರಿದಾಗ ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಆಯಾ ಇಲಾಖೆಯ ಬೇಡಿಕೆಗಳು ಬಂದಾಗ ಕೇಳಬಹುದು. ಹೇಗಿದ್ದರೂ ವಿಷಯ ಸಮಿತಿಗಳು ಇಲ್ಲ, ಬೇಡಿಕೆಗಳು ಬರುತ್ತದೆ. ಆಗ ಕೇಳಬಹುದು.

ಶ್ರೀ ಹೆಚ್. ಡಿ. ಬಸವರಾಜು : ನನ್ನ ಉದ್ದೇಶವೆಂದರೆ, ಅವರಿಗೆ ಈ ಮಾಹಿತಿಯ ಚುರುಕು ಮುಟ್ಟಿಸಬೇಕು ಎಂದಷ್ಟೇ ಹೇಳುತ್ತಿದ್ದೇನೆ. ಅವರ ಗಮನಕ್ಕೆ ತರುವುದಕ್ಕೋಸ್ಕರ ಹೇಳುತ್ತಿದ್ದೇನೆ. ಈ ಸದನದಲ್ಲಿ ಅವರು ಸಮಾಜ ಕಲ್ಯಾಣ ಇಲಾಖೆ ಉತ್ತಮವಾದಂಥ ಕೆಲಸ ಮಾಡಿದೆ ಎಂದು ಹೇಳಿದರು. ಉತ್ತಮವಾದಂಥ ಕೆಲಸ ಮಾಡುವುದರಲ್ಲಿ ಎಲ್ಲೋ ಒಂದು ಕಡೆ ತಪ್ಪಾಗಿದೆ ಎಂದು ಹೇಳುತ್ತಿದ್ದೇನೆ. ಅವರು ಕೊಟ್ಟಿರುವಂಥ ಅಂಕಿ ಅಂಶಗಳಲ್ಲಿ 9,500 ಕೊಳವೆ ಬಾವಿಗಳನ್ನು ತೋಡಿದ್ದೇವೆ ಎಂದು ಹೇಳಿದರು. ಅದು ಸತ್ಯವಾದಂಥ ಮಾಹಿತಿ. ಆದರೆ ವಿದ್ಯುದ್ಧೀಕರಣ ಮಾಡಿರುವಂಥಾದ್ದು 5,285 ಕೊಳವೆ ಬಾವಿಗಳಿಗೆ ಮಾತ್ರ. ಮತ್ತು 3,760 ಕೊಳವೆ ಬಾವಿಗಳಿಗೆ ಪಂಪ್‌ಸೆಟ್ ಖರೀದಿಯಾಗಿಲ್ಲ. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ಸಮಾಜ ಕಲ್ಯಾಣ ಇಲಾಖೆಯವರು ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ತಾವು ಏನು ಹೇಳುತ್ತಿದ್ದೀರಿ, ಆ ರೀತಿ ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಎಲ್ಲರೂ ಬ್ರೀಫ್‌ಆಗಿ ಒಂದೊಂದು ನಿಮಿಷದಲ್ಲಿ ಮುಗಿಸಬೇಕು. ಸಮಸ್ಯೆ ಏನೆಂದರೆ, ಹೇಳಿದ್ದನ್ನೇ ಹೇಳುತ್ತಾರೆ, ಬಹಳ ಟೈಂ ತೆಗೆದುಕೊಳ್ಳುತ್ತಾರೆ. ನಾನು ತಾಳ್ಮೆ ಕಳೆದುಕೊಂಡರೆ ಅದರ ಬಗ್ಗೆ ಕೆಟ್ಟದಾಗಿ ವ್ಯಾಖ್ಯಾನ ಮಾಡುತ್ತಾರೆ. ನಾನೂ ಮನುಷ್ಯ ತಾನೇ, ತಾಳ್ಮೆ ನನ್ನಲ್ಲಿ ಯಾವ ರೀತಿ ಉತ್ಪತ್ತಿಯಾಗುತ್ತದೆ.

+ ಶ್ರೀ ಟಿ. ಬಿ. ಜಯಚಂದ್ರ : ತಮ್ಮ ಅಭಿಪ್ರಾಯಕ್ಕೆ ನಾನೂ ಕೂಡ ಧ್ವನಿಗೂಡಿಸುತ್ತೇನೆ. ಮುಖ್ಯಮಂತ್ರಿಗಳು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ನಡೆದ ಚರ್ಚೆಗೆ ಕೊಡುವ ಅವರ ಉತ್ತರ, ಅವರ ಭಾಷಣ ಬಹಳ ಅತ್ಯುತ್ತಮವಾದಂಥ ಭಾಷಣವಾಗುತ್ತದೆ. ಅವರು ರಾಜ್ಯದ ಸಮಗ್ರ ಆರ್ಥಿಕ ಮತ್ತು ಸಾಮಾಜಿಕ ಚಿಂತನೆಯನ್ನು ಹರಿಸುತ್ತಾರೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೆ. ಆದರೆ ನನಗೆ ನಿರಾಸೆಯಾಯಿತು. ನನಗನ್ನಿಸುತ್ತದೆ, ನೀವು ನೇರ ನುಡಿಗೆ ಹೆಸರಾಗಿದ್ದರೂ ಕೂಡ, ನಾವು ಚುಚ್ಚಿಚುಚ್ಚಿ ಹೇಳಿದರೂ ಕೂಡ ನಿಮ್ಮಲ್ಲಿ ಎಲ್ಲೋ ಒಂದು ಕಡೆ ಅಳುಕು ಇದೆ. ಆದರೂ ಕೂಡ ನಾವು ರಾಜ್ಯವನ್ನು ಹೇಗೆ ಮುಂದಿನ ಯುಗಕ್ಕೆ ತೆಗೆದುಕೊಂಡು ಹೋಗಬೇಕು ಎನ್ನುವುದನ್ನು ಯಾವುದೋ ಒಂದು ಇಕ್ಕಟ್ಟಿಗೆ ಸಿಕ್ಕಿ ಪ್ರಾಮಾಣಿಕವಾಗಿ ಹೇಳಲು ಆಗುತ್ತಿಲ್ಲ. ಒಂದು ಬಹಳ ಮುಖ್ಯವಾದುದೆಂದರೆ, ಇನ್‌ಫರ್ಮೇಷನ್ ಟೆಕ್ನಾಲಜಿ ಬಗ್ಗೆ ತಾವು ಹೇಳಿದಿರಿ. ಇದರಿಂದ 2,200 ಕೋಟಿ ರೂಪಾಯಿಗಳಷ್ಟು ಆದಾಯ ಬರುತ್ತಿದೆ. ನಮ್ಮ ರಾಜ್ಯದಿಂದ ಯಾವುದೇ ಕೈಗಾರಿಕೆ ಆಂಧ್ರಪ್ರದೇಶಕ್ಕೆ ಹೋಗುತ್ತಿಲ್ಲ ಎಂದು ಹೇಳಿದಿರಿ. 2,500 ಕೋಟಿ ರೂಪಾಯಿ ಆದಾಯ ಬರುವ ಮಟ್ಟದಲ್ಲಿ, ಎಕ್ಸ್‌ಪೋರ್ಟ್ ಆಗುವ ಮಟ್ಟದಲ್ಲಿ ಬೆಂಗಳೂರಿನಲ್ಲಿ ಇನ್‌ಫರ್ಮೇಷನ್ ಟೆಕ್ನಾಲಜಿ ಇದ್ದರೆ ಅದಕ್ಕೆ ಕಾರಣ our environment & human resources. ಸರ್ಕಾರದಿಂದ ಏನೂ ಇನ್‌ಫ್ರಾಸ್ಟ್ರಕ್ಚರನ್ನು ಮಾಡಿಲ್ಲ. ಇದು ಕೇವಲ ಐದು ವರ್ಷಗಳಲ್ಲಿ 2,300 ಕೋಟಿ ರೂಪಾಯಿಗಳವರೆಗೆ ಹೋಗಿದೆ. ಅದಕ್ಕೆ ಸರಿ ಸಮಾನವಾಗಿ ಪೈಪೋಟಿ ಮಾಡುತ್ತಿರತಕ್ಕಂಥ ಆಂಧ್ರಪ್ರದೇಶದಲ್ಲಿ, ಟೆಕ್ನಾಲಜಿ ಇನ್‌ಫಾರ್ಮೇಷನ್‌ಗೆ ಬೇಕಾಗಿರತಕ್ಕಂಥ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಎಲ್ಲವನ್ನೂ ಸ್ವತಃ ಮುಖ್ಯಮಂತ್ರಿಗಳೇ ಕಾರ್ಯಾಭಾರ ವಹಿಸಿ ನಾಗಾಲೋಟದಲ್ಲಿ ಮಾಡುತ್ತಿದ್ದಾರೆ. ಅವರು ನಿಮಗೆ ಸರಿಸಮಾನವಾದ ಇನ್‌ಫ್ರಾಸ್ಟ್ರಕ್ಚರನ್ನು ಡೆವೆಲಪ್ ಮಾಡಿದ ಸಂದರ್ಭದಲ್ಲಿ ಎಲ್ಲಾ ಕೈಗಾರಿಕೆಗಳು ಅಲ್ಲಿಗೆ ಹೋಗತಕ್ಕಂಥ ಸಂದರ್ಭ ಇದೆ. ಬ್ರಿಲ್‌ಗೇಟ್ಸ್‌ನವರೂ ಕೂಡ ಅಲ್ಲಿಗೆ ಬಂದು ಹೋಗಿದ್ದಾರೆ. ಕರ್ನಾಟಕಕ್ಕೆ ಅಂಥ ಎಕ್ಸ್‌ಪರ್ಟ್ಸ್ ಯಾರಾದರೂ ಬಂದಿದ್ದರೇ? ರತನ್‌ಟಾಟಾರವರು ಇವತ್ತು ನಿಮ್ಮ ಮನೆಯ ಬಾಗಿಲಲ್ಲಿ ಗಂಟೆಗಟ್ಟಳೆ ಕಾಯಬೇಕಾಗಿ ಬಂತು. ನೀವು ಒಂದು ಒಳ್ಳೆಯ ವಾತಾವರಣವನ್ನು ಸೃಷ್ಟಿ ಮಾಡಲಿಲ್ಲ ಎನ್ನುವುದನ್ನು ಹೇಳಲು ನಾನು ಇಷ್ಟಪಡುತ್ತೇನೆ. ಮತ್ತೊಂದು ಬಹಳ ಮುಖ್ಯವಾದುದೆಂದರೆ, ಯಾವುದೇ ಕೈಗಾರಿಕೆ ಮುಂದುವರೆಯಬೇಕಾದರೂ ಕೂಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಬಹಳ ಮುಖ್ಯವಾದುದು. ದೇವನಹಳ್ಳಿಯಲ್ಲಿ ಕಟ್ಟಬೇಕಾಗಿರತಕ್ಕಂಥ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಏನಾಯಿತು ಎನ್ನುವ ಬಗ್ಗೆ ಎಲ್ಲಿಯೂ ಕೂಡ ಯಾವುದೇ ವಿಧವಾದ ಪ್ರಸ್ತಾಪವನ್ನು ಮಾಡಿಲ್ಲ. ಅದನ್ನು ದಯವಿಟ್ಟು ಹೇಳಬೇಕಾಗುತ್ತದೆ.

ಪವರ್ ಜನರೇಷನ್ ಬಗ್ಗೆ ತಾವು ಹೇಳಿದ್ದೀರಿ. 600 ಮೆಗಾವಾಟ್‌ನಷ್ಟು ಪವರ್‌ಅನ್ನು ಆ್ಯಡ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ಇವತ್ತು ಅಷ್ಟೇ ಕನ್‌ಸಂಪ್‌ಷನ್ ಜಾಸ್ತಿಯಾಗಿದೆ. ಕಳೆದ ವರ್ಷಕ್ಕೂ, ಈ ವರ್ಷಕ್ಕೂ ಹೋಲಿಸಿದರೆ ಕನ್‌ಸಂಪ್‌ಷನ್ ಶೇ. 15-20 ರಷ್ಟು ಜಾಸ್ತಿಯಾಗಿದೆ. ಬಕಾಸುರನ ಹೊಟ್ಟೆಗೆ ಆರು ಕಾಸಿನ ಮಜ್ಜಿಗೆ ಎನ್ನುವ ರೀತಿಯಲ್ಲಿ ನೀವು ಕೇವಲ 600 ಮೆಗಾವಾಟ್‌ಅನ್ನು ಸೇರಿಸುವುದಾದರೆ, ಅದು ನಾಗಾಲೋಟದಲ್ಲಿ ಹೆಚ್ಚುತ್ತಿರುವಂಥ ಕನ್‌ಸಂಪ್‌ಷನ್ ಪ್ರಮಾಣಕ್ಕೆ

ಸರಿಯಾಗುವುದಿಲ್ಲ. ರಾಜ್ಯ ಸರ್ಕಾರದ ಸಂಪನ್ಮೂಲದ ಮುಖೇನ ವಿದ್ಯುತ್ತನ್ನು ಉತ್ಪಾದನೆ ಮಾಡಲು ಆಗುವುದಿಲ್ಲ. ಕೊಜೆಂಟ್ರಿಕ್ಸ್ ಯೋಜನೆ ಏನಾಯಿತು ಎನ್ನುವುದನ್ನು ತಾವು ಹೇಳಬೇಕು. ವಿದ್ಯುಚ್ಛಕ್ತಿ ತಯಾರಿ ಬಗ್ಗೆ ನಿಮ್ಮ ನೀತಿ ಏನು? ಯಾವ ರೀತಿಯಾಗಿ ಸರಿದೂಗಿಸುತ್ತೀರಿ ಎನ್ನತಕ್ಕಂಥಾದ್ದರ ಬಗ್ಗೆ ಹೇಳಬೇಕಾಗುತ್ತದೆ. ಅದರ ಬಗ್ಗೆ ತಾವು ಪ್ರಸ್ತಾಪ ಮಾಡಿಲ್ಲ. ಇವತ್ತು ಕೈಗಾರಿಕೆಗಳು ಸಂಪೂರ್ಣವಾಗಿ ಮುಚ್ಚಿ ಹೋಗತಕ್ಕಂಥ ಪರಿಸ್ಥಿತಿಯಾಗಿದೆ. ಅದರಲ್ಲೂ ವಿಶೇಷವಾಗಿ ಸಣ್ಣ ಕೈಗಾರಿಕೆಗಳು ಶಾಶ್ವತವಾಗಿ ಯಾವತ್ತೂ ತೆರೆಯಲು ಸಾಧ್ಯವಿಲ್ಲ ಎನ್ನುವಂಥ ಪರಿಸ್ಥಿತಿ ಇದೆ. ಮುಖ್ಯವಾಗಿ ಅವುಗಳಿಗೆ ತೊಂದರೆಯಾಗುತ್ತಿರತಕ್ಕಂಥಾದ್ದು ನಿಮ್ಮ ವಿದ್ಯುತ್‌ನಿಂದ.

ಒಂದು ಕಡೆ ನೀವು ಕೈಗಾರಿಕೆಗಳಿಗೆ ಇನ್‌ಸೆಂಟೀವ್ಸ್ ಕೊಡುತ್ತೀರಿ, ಟ್ಯಾಕ್ಸ್ ಕನ್‌ಸೆಷನ್ಸ್ ಕೊಡುತ್ತೀರಿ. ಇನ್ನೊಂದು ಕಡೆ ಕೆ.ಇ.ಬಿ. ಮುಖೇನ ಡೆವೆಲಪ್‌ಮೆಂಟ್ ಚಾರ್ಜಸ್ ಎಂದು ತೆಗೆದುಕೊಳ್ಳುತ್ತಿದ್ದೀರಿ. 65 ಹೆಚ್.ಪಿ. ಲೋ ಟೆನ್‌ಷನ್‌ನಲ್ಲಿ ಮೊದಲು ಒಬ್ಬ ಒಂದು ಕೈಗಾರಿಕೆಯನ್ನು ಮಾಡಬೇಕಾದರೆ 45-50 ಸಾವಿರ ರೂಪಾಯಿ ಡೆಪಾಸಿಟ್ ಕೊಡಬೇಕಾಗಿತ್ತು. ನವೆಂಬರ್ ತಿಂಗಳಲ್ಲಿ ಒಂದು ನೋಟಿಫಿಕೇಷನ್ ಮಾಡಿದ್ದಾರೆ. ಆ ನೋಟಿಫಿಕೇಷನ್ ಪ್ರಕಾರ 1 ಲಕ್ಷದ 80 ಸಾವಿರ ರೂಪಾಯಿಗಳ ಡೆವೆಲಪ್‌ಮೆಂಟ್ ಚಾರ್ಜನ್ನು ಕಟ್ಟಬೇಕಾಗುತ್ತದೆ. ಕನ್ಸೆಷನ್ ಕೊಡುತ್ತೇವೆ, ಉತ್ತೇಜನ ಕೊಡುತ್ತೇವೆ ಎಂದು ಒಂದು ಕಡೆ ಹೇಳುವುದು, ಇನ್ನೊಂದು ಕಡೆ ಕುತ್ತಿಗೆಯನ್ನು ಹಿಡಿಯತಕ್ಕಂಥ ಕೆಲಸವನ್ನು ಮಾಡಿದರೆ ಇಲ್ಲಿ ಹೇಗೆ ಕೈಗಾರಿಕೆಗಳು ಬರಲು ಸಾಧ್ಯ.

MR. SPEAKER : It almost becomes a mini speech. It doesn't amount to seeking clarification as such.

ಶ್ರೀ. ಟಿ.ಬಿ. ಜಯಚಂದ್ರ : ಅಧ್ಯಕ್ಷರೇ ಬಜೆಟ್ಟಿನ ಮೇಲಿನ ಚರ್ಚೆಗೆ ಉತ್ತರ ಕೊಟ್ಟಿದ್ದಾರೆ. ಇವತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಉತ್ತರ ಕೊಡುವಾಗ ಮುಖ್ಯ ಮಂತ್ರಿಗಳಾಗಿರತಕ್ಕಂಥವರು ತಮ್ಮ ನೀತಿಯ ಬಗ್ಗೆ ಹೇಳಬೇಕಾಗುತ್ತದೆ. ಈ ರಾಜ್ಯವನ್ನು ನಾವು ಹೇಗೆ ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದೇವೆ ಎನ್ನುವ ಬಗ್ಗೆ ಈ ಸಭೆಯ ಮುಖೇನ ನಾವು ರಾಜ್ಯದ ಜನಗಳಿಗೆ ಸಮಾಧಾನ ಹೇಳಬೇಕಾಗುತ್ತದೆ. ನಾವು ಇದನ್ನು ಭಾಷಣದ ರೂಪದಲ್ಲೇ ಕೇಳಬೇಕಾಗುತ್ತದೆ. ಅವರು ಭಾಷಣದ ರೂಪದಲ್ಲೇ ಉತ್ತರ ಹೇಳಬೇಕಾಗುತ್ತದೆ, ಇನ್ಯಾವ ರೀತಿಯಲ್ಲೂ ಹೇಳಲಾಗುವುದಿಲ್ಲ. ತಾವು ಕೃಷಿಯ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಿ ಅದನ್ನು ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಿಸಿದ್ದೀರಿ. ಅದಕ್ಕೆ ಈಗಾಗಲೇ ಒಂದು ಸರ್ಕಾರೀ ಆದೇಶವನ್ನು ಕೂಡ ಇಷ್ಯೂ ಮಾಡಿದ್ದಾರೆ. ಆದರೆ ಆ ಆದೇಶದಲ್ಲಿರತಕ್ಕಂಥ ಯಾವುದಾದರೂ ಅಂಶಗಳನ್ನು ಜಾರಿಗೊಳಿಸಲು ಸಾಧ್ಯವೇ? ಇದರ ಪ್ರಯೋಜನವನ್ನು ಪಡೆದುಕೊಂಡು ಯಾವುದಾದರೂ ಕೈಗಾರಿಕೆಗಳು ಬರಲು ಸಾಧ್ಯವೇ ಎನ್ನುವುದನ್ನು ನೋಡಿದರೆ, ಆದಕ್ಕೆ ಮುಖ್ಯವಾಗಿ ಬೇಕಾದ ಪವರ್ ಇರಬಹುದು, ಕೋಲ್ಡ್ ಸ್ಟೋರೇಜ್ ಇರಬಹುದು, ಮತ್ತೊಂದು ಇರಬಹುದು, ಇವುಗಳ್ಯಾವುದೂ ಇಲ್ಲದೆ ಕೈಗಾರಿಕೆಗಳು ಬರಲು ಸಾಧ್ಯವಿಲ್ಲ. ಇದು ಕೇವಲ ಕಾಗದದ ಮೇಲೆ ಸಾಧನೆಯಾಗುತ್ತದೆ ಎಂದು ಹೇಳುತ್ತೇನೆ. ಎಲ್ಲಾ ರೀತಿಯಿಂದಲೂ

ರಾಜ್ಯ ಇಂಥ ಸಮಸ್ಯೆಗಳನ್ನು ಎದುರಿಸುತ್ತಿದೆ. ನಾವು ಯಾವ ರೀತಿಯಾಗಿ ಅದನ್ನು ಬಗೆಹರಿಸುತ್ತೇವೆ ಎನ್ನುವ ಒಂದು ಕಾನ್‌ಫಿಡೆನ್ಸ್‌ಅನ್ನು ಕ್ರಿಯೇಟ್ ಮಾಡತಕ್ಕಂಥ ಏನಾದರೂ ಒಂದು ವಿಚಾರವನ್ನು ಹೇಳಿದರೆ ಆಗುತ್ತದೆ. ಬರೀ ಸರ್ಕಾರೀ ಆದೇಶವನ್ನು ನೋಡಿಕೊಂಡು ಇವತ್ತು ಕೈಗಾರಿಕೆಗಳು ಬರುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ.

ಇನ್ನು ರೇಷ್ಮೆ ಬಗ್ಗೆ ಹೇಳಬೇಕೆಂದರೆ, ಈಗಾಗಲೇ ರೇಷ್ಮೆ ಆಮದಾಗುತ್ತಿರತಕ್ಕಂಥ ನೀತಿಯಿಂದಾಗಿ ನಮ್ಮಲ್ಲಿರತಕ್ಕಂಥ ರೇಷ್ಮೆ ಬೆಳೆಗಾರರು ಈ ಬೆಳೆಯನ್ನು ಸಂಪೂರ್ಣವಾಗಿ ಕೈ ಬಿಡಬೇಕಾಗಿರತಕ್ಕಂಥ ಪರಿಸ್ಥಿತಿಯ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಆದರೆ, ಅದರಿಂದ ಯಾವ ರೀತಿಯ ಪ್ರತಿಫಲವೂ ಸಿಗಲಿಲ್ಲ. ಕೇಂದ್ರದ ವಾಣಿಜ್ಯ ಸಚಿವರಾದ ರಾಮಕೃಷ್ಣ ಹೆಗಡೆಯವರು, ಯಾವತ್ತಿಗೂ ಆ ನೀತಿಯನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಅನೇಕ ಸಲ ಹೇಳಿದ್ದಾರೆ. ಹೀಗಿರುವಾಗ ತಮ್ಮ ನಿಲುವು ಏನು ಎನ್ನುವುದನ್ನು ಹೇಳಬೇಕು. ಸುಮಾರು 35 ಲಕ್ಷ ರೈತ ಕುಟುಂಬದವರು ನಾನಾ ರೀತಿಯಲ್ಲಿ ಇದನ್ನೇ ಉದ್ಯೋಗವನ್ನಾಗಿ ಅವಲಂಬಿಸಿಕೊಂಡಿರುವಾಗ ಅವರಿಗೆ ಯಾವ ರೀತಿ ಸಮಾಧಾನವನ್ನು ಹೇಳುತ್ತೀರಿ ?

ಮತ್ತೊಂದು ಬಹಳ ಮುಖ್ಯವಾದ ವಿಚಾರವೆಂದರೆ, ನಮ್ಮ ನಾಯಕರು ಈಗಾಗಲೇ ಹೇಳಿದಂತೆ ಸರ್ಕಾರದ ಆದೇಶದ ಮುಖೇನ ಬೈ ವಾಟರ್ ಸಂಸ್ಥೆಗೇ ಕೊಡಬೇಕು ಎಂದು ಸರ್ಕಾರದ ಸ್ಪಷ್ಟವಾದ ತೀರ್ಮಾನವಿತ್ತು. ಅದಕ್ಕೋಸ್ಕರ ಹೇಳುತ್ತಿದ್ದೇನೆ, If your hands are very clean, really clean, you refer it to a House Committee.

ಸುಮಾರು ಒಂದೂವರೆ - ಎರಡು ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಸಾಲದ ಮುಖೇನ ತರುವಂಥ ಸಂದರ್ಭದಲ್ಲಿ ಒಂದು ಸದನ ಸಮಿತಿ ವರದಿ ಕೊಟ್ಟರೆ ಅದರಿಂದ ತಪ್ಪೇನಾಗುತ್ತದೆ ? ನೀವು ಅದಕ್ಕೆ ಗ್ಯಾರಂಟಿಯನ್ನು ಕೊಡಲೇಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಇವತ್ತು ಇದು ಸಾಲ ಅಲ್ಲ, ಅವರು ದುಡ್ಡು ತೆಗೆದುಕೊಂಡು ಬರುತ್ತಾರೆ, ಅವರೇ ಇನ್‌ವೆಸ್ಟ್ ಮಾಡುತ್ತಾರೆ, ಆ ಮೇಲೆ ನೀರನ್ನು ನಾವು ಅವರಿಂದ ಕೊಂಡುಕೊಳ್ಳುತ್ತೇವೆ. ಸರ್ಕಾರ ಇದರಲ್ಲಿ ಒಂದು ಪೈಸೆಯನ್ನೂ ಸಹ ಇನ್‌ವೆಸ್ಟ್ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈಗ ನಮಗೆ ಸಿಕ್ಕಿದಂಥ ಮಾಹಿತಿಗಳ ಆಧಾರದ ಮೇಲೆ ಹೇಳುವುದಾದರೆ ಈ ವ್ಯವಹಾರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರ ನಡವಳಿಕೆ ಬಗ್ಗೆ ಸಾಕಷ್ಟು ಅನುಮಾನ ಇದೆ. ಆ ಮೇಲೆ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೊಟ್ಟಂಥ ತೀರ್ಮಾನವನ್ನು ಕ್ಯಾಬಿನೆಟ್‌ಗೆ ತಂದಾಗ ಅಲ್ಲಿ ಅದನ್ನು ತಿರಸ್ಕರಿಸಿ ಹಿಂದಿನ ಮಂತ್ರಿಗಳು ಕೊಟ್ಟಂಥ ಅಭಿಪ್ರಾಯ ಕ್ಯಾಬಿನೆಟ್‌ಗೆ ಬಂದಿಲ್ಲವೇ ?

ಶ್ರೀ ಜೆ. ಹೆಚ್. ಪಟೇಲ್ : ಅವರು ಕೊಟ್ಟ ಸಲಹೆಯನ್ನು ತಿರಸ್ಕರಿಸಿದೆಯೇ ಎಂದು ಕೇಳುತ್ತೀರಿ. ಏನಿದು ?

ಶ್ರೀ ಕಾಗೋಡು ತಿಮ್ಮಪ್ಪ : ಆದರೆ ಕ್ಯಾಬಿನೆಟ್ ನೋಟ್ ಅವರದ್ದು ಅಲ್ಲವೇ? ಅಲ್ಲ ಎಂದರೆ ಹಾಗೆ ಹೇಳಿಬಿಡಿ. ಈಗ ಸಧ್ಯಕ್ಕೆ ಏನಾದರೂ ಆ ಖಾತೆಯಿಂದ ತಪ್ಪಿಸಿ ದೂರ ಇಟ್ಟಿದ್ದರೆ ಒಳ್ಳೆಯದು.

ಶ್ರೀ ಜೆ. ಹೆಚ್. ಪಟೇಲ್ : ಡಾಕ್ಯುಮೆಂಟ್ ಇಲ್ಲ. ಆ ತರಹ ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮತ್ತು ಕ್ಯಾಬಿನೆಟ್ ನೋಟ್ ಕೆಳಗಡೆ ಅರ್ಬನ್ ಡೆವಲಪ್‌ಮೆಂಟ್ ಸೆಕ್ರೆಟರಿಯ ಸಿಗ್ನೇಚರ್ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ... ಆದ್ದರಿಂದ, ಸಂಶಯ ನಿವಾರಣೆ ಆಗಬೇಕಾದರೆ ಸದನ ಸಮಿತಿ ಮಾಡುವುದು ಒಳ್ಳೆಯದು.

ಶ್ರೀ ಗೋವಿಂದಪ್ಪ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕೇವಲ ಬೆಂಗಳೂರು ವಿಭಾಗ, ಮೈಸೂರು ವಿಭಾಗದ ವಿಚಾರ ಮಾತ್ರ ಪ್ರಸ್ತಾಪವಾಗುತ್ತಿದೆ. ಉತ್ತರ ಕರ್ನಾಟಕದ ವಿಚಾರವಾಗಿ ನಾವು ಪದೇ ಪದೇ ರಿಕ್ವೆಸ್ಟ್ ಮಾಡಿಕೊಂಡರೂ ನಮಗೆ ಅವಕಾಶ ಸಿಗುತ್ತಿಲ್ಲ. ನಮ್ಮದೂ ಕೂಡ ಒಂದು ಸಮಸ್ಯೆ ಇದೆ. 1870ನೇ ಇಸವಿಯಲ್ಲಿ ಮುಧೋಳ ಕೋರ್ಟ್ ಕಟ್ಟಡ ಕಟ್ಟಿದ್ದು ಅದು ಹಾಳಾಗಿ ಬಿದ್ದುಹೋಗುತ್ತಿದೆ.

ಇದನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ಎಂಟು ದಿವಸದಿಂದ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಸದನದಲ್ಲಿ ಸಂಬಂಧಪಟ್ಟವರು ಎಲ್ಲರೂ ಇದ್ದಾರೆ. ದಯವಿಟ್ಟು ಈಗ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಇದನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ತೆಗೆದುಕೊಳ್ಳೋಣ ಈಗ ಬೇಡ.

ಶ್ರೀ ಗೋವಿಂದಪ್ಪ ಎಂ. ಕಾರಜೋಳ : ಮುಂದಿನ ಸಾಲಿನಲ್ಲಿ ಕುಳಿತವರು ಶೂನ್ಯ ವೇಳೆಯಲ್ಲಿ ಅಥವಾ ಬೇರೆ ಯಾವುದೇ ಸಮಯದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಿಡುವುದಿಲ್ಲ. ಎಲ್ಲಾ ಸಮಯದಲ್ಲೂ ಮುಂದಿನ ಸಾಲಿನವರೇ ಮಾತನಾಡುತ್ತಿರುತ್ತಾರೆ. ನಾನು ಪರ್ಸನಲಿ ತಮ್ಮನ್ನು ಭೇಟಿ ಆಗಿ ಕೇಳಿಕೊಂಡಿದ್ದೇನೆ. ಆದರೂ ಕೂಡ ನನಗೆ ಇದುವರೆಗೆ ಅವಕಾಶ ಕಲ್ಪಿಸಿಕೊಟ್ಟಿಲ್ಲ. ಒಂದು ನಿಮಿಷ ಪ್ರಸ್ತಾಪ ಮಾಡಿಬಿಡುತ್ತೇನೆ. ಈ ವಿಷಯ ಕೂಡ ಆಯವ್ಯಯಕ್ಕೆ ಸಂಬಂಧಪಟ್ಟ ವಿಚಾರವಾಗಿದೆ.

ಅಧ್ಯಕ್ಷರು : ಈಗ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಹೀಗೆ ಮಾಡಿದರೆ ನಾನು ಸದನ ನಡೆಸುವುದಾದರೂ ಹೇಗೆ ? ತಾಳ್ಮೆಯಾದರೂ ಎಲ್ಲಿಂದ ಬರಬೇಕು ?

ಶ್ರೀ ಗೋವಿಂದಪ್ಪ ಎಂ. ಕಾರಜೋಳ : ಮುಂದಿನ ಎರಡು ಸಾಲಿನವರು ಮಾತ್ರ ಮಾತನಾಡಿಕೊಂಡು ಅವರಿಗೆ ಸಂಬಂಧಪಟ್ಟ ವಿಚಾರವನ್ನು ಮಾತ್ರ ಕೇಳುತ್ತಾ ಕುಳಿತುಕೊಂಡರೆ ನಾವು ಏನು ಮಾಡಬೇಕು? ದಯಮಾಡಿ ಹೇಳಿ. ಇಲ್ಲವೆಂದರೆ ಈ ಸದನದಲ್ಲಿ ನಮ್ಮನ್ನು ಸಸ್ಪೆಂಡ್ ಮಾಡಿಬಿಡಿ. ನಾವು ಹೊರಗೆ ಹೋಗಿಬಿಡುತ್ತೇವೆ. ನಾವು ಏನು ಮಾಡಬೇಕು ಹೇಳಿ.

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ನಿಮಗೆ ಖಂಡಿತಾ ಶೂನ್ಯವೇಳೆಯಲ್ಲಿ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಶ್ರೀ ಖರ್ಗೆಯವರು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ್ದಾರೆ, to make it more explicit, ಒಂದೇ ಒಂದು

ಸಮರ್ಥನೆಯನ್ನು ಕೊಡುತ್ತೇನೆ. ನಾನು ಇದನ್ನು ಓದಿದರೆ ಯಾವುದೋ ಪೇಪರ್ ಇಟ್ಟುಕೊಂಡು ಓದುತ್ತೀರಾ ಎಂದು ಸರ್ಕಾರದವರು ಹೇಳುತ್ತಾರೆ. ಇದನ್ನು ಓದಿದರೆ - ನಿಮ್ಮ ಕೈಗೆ ಇದು ಹೇಗೆ ಸಿಗುತ್ತದೆ ಎಂದು ಕೇಳುತ್ತಾರೆ. No. UDD 48 MNN 97 Cabinet Note-Subject No.C 504/98. ಈ ಕ್ಯಾಬಿನೆಟ್ ನೋಟನ್ನು ನಾನು ಪೂರ್ತಿ ಓದುವುದಕ್ಕೆ ಹೋಗುವುದಿಲ್ಲ. ಪ್ಯಾರಾ ನಂ. 3 ಇದು ಕ್ಯಾಬಿನೆಟ್ ನೋಟ್‌ನಲ್ಲಿ ಮತ್ತು ರಿವೈಸ್ಡ್ ಕ್ಯಾಬಿನೆಟ್ ನೋಟ್‌ನಲ್ಲೂ ಅದೇ ಇದೆ. ಅದರಲ್ಲಿ ಏನೂ ಕೂಡ ವ್ಯತ್ಯಾಸವಿಲ್ಲ.

" In this instance, the BWSSB has invited competitive bids. However, the choice of an appropriate partner for the BOOT project has to be based on the criteria laid down in the bid invitation letter. The project proposals received from BWSSB were discussed in a meeting held on 8-12-98. Those present were the following :

1) The Chief Secretary to the Government
2) Principal Secretary, Finance Department
3) Chairman, BWSSB
4) Principal Secretary, Urban Development Dept.
5) Secretary, Dept. of Legislation & Parliamentary Affairs.

The meeting discussed about the evaluation of the bids which have been forwarded to the Government and how the project should be further processed. The project size is around Rs. 1,500 crores. At the rough rate indicated by the bidders the cost of the water to the BWSSB will be upward of Rs. 400 crores p.a. BWSSB has evaluated the offers received in part with the assistance of consultants and in part by itself.

ನಾನು ಇದನ್ನು ಏತಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆಂದರೆ - ನಾವು ಇದಕ್ಕೆ ದುಡ್ಡು ಕೊಡುತ್ತಿಲ್ಲ, ಇದು ಬೂಟ್ ಸಿಸ್ಟಮ್ ಎಂದು ಸರ್ಕಾರದ ಕಡೆಯಿಂದ ಹೇಳುತ್ತೀರಿ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಆದರೆ ನಾವು ವರ್ಷಕ್ಕೆ 432 ಕೋಟಿ ರೂಪಾಯಿಗಳನ್ನು ಕಟ್ಟಬೇಕು. ಇಂಥ ಒಂದು ದೊಡ್ಡ ಪ್ರಾಜೆಕ್ಟ್ ಇರುವುದರಿಂದ ಇದರಲ್ಲಿ ಅನೇಕ ಮಿಸ್‌ಲೀಡಿಂಗ್ ಆಗಿದೆಯೆಂದು ನಮಗೆ ಅನಿಸುತ್ತಾ ಇರುವುದರಿಂದ, ಇದು ಬಹಳ ಕ್ಲಿಯರ್ ಆಗಿಯೇ ಇದೆಯೆಂದು ಸರ್ಕಾರದ ಕಡೆಯಿಂದ ಹೇಳುತ್ತೀರಿ. You, please, in the interest of Bangalore Citizens, Karnataka Citizens, ಯಾರ್ಯಾರಿಗೆ ಸಂಶಯ ಇದೆ, ಅದಕ್ಕೋಸ್ಕರ ಸದರಿ ವಿಷಯವನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿ, ಒಂದು ತಿಂಗಳಿನಲ್ಲಿ ವರದಿ ಕೊಡಲಿ, ಇದರಲ್ಲಿ ಕಳೆದುಕೊಳ್ಳುವುದು ಏನಿದೆ ಹೇಳಿ ? ಇದು ಕ್ಯಾಬಿನೆಟ್ ನೋಟ್ ಹೌದೋ ಅಥವಾ ಅಲ್ಲವೋ ಹೇಳಿ. ಇದು ಕ್ಯಾಬಿನೆಟ್ ನೋಟ್ ಅಲ್ಲ ಎಂದರೆ ಅಲ್ಲವೆಂದು ಹೇಳಿಬಿಡಿ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಪುನಃ ಪುನಃ ಅದೇ ವಿಷಯ ಪ್ರಸ್ತಾಪ ಮಾಡುವುದು, ನಾನು ಅದೇ ಉತ್ತರ ಕೊಡುವುದು, ಅದು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಎಲ್ಲರಿಗೂ ಬೇಸರ ತರುತ್ತದೆ. ಇವತ್ತು ನಾನು ನನ್ನ ಯೂಜ್ಯುಯಲ್ ಸ್ಟೈಲ್, ಕೊಟೇಷನ್ಸ್ ಸೇರಿಸಿ ಮಾತನಾಡಿಲ್ಲ,

ಏಕೆಂದರೆ ಅದನ್ನು ಹಾಸ್ಯಾಸ್ಪದ, ಫ್ಯಾಕ್ಟ್ಸನ್ನು ಹೇಳಿಲ್ಲ, ಶಂಕರಾಚಾರ್ಯರನ್ನು ಹೇಳಿದರು, ಮಧ್ವಾಚಾರ್ಯರನ್ನು ಹೇಳಿದರು, ಬಸವಣ್ಣನವರನ್ನು ಹೇಳಿದರು ಆ ತರಹ ಏಕೆಂದರೆ ರಸಿಕ ಇದ್ದರೆ ಕಾವ್ಯ ಹಾಡಬಹುದು, ಅರಸಿಕನಿಗೆ ಕಾವ್ಯ ಹಾಡತಕ್ಕಂಥ ಶಿಕ್ಷೆ ಕೊಡಬೇಡಪ್ಪ ದೇವರೇ ಎಂದು ಕವಿ ಕೇಳುತ್ತಾನೆ. ಅದಕ್ಕೋಸ್ಕರ ಇವತ್ತು I do agree. But, factually I was more elaborate than my previous speeches. ಏನಾದರೂ ಇದ್ದರೆ ಮುಂದಿನ ಅಧಿವೇಶನದಲ್ಲಿ ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ವಾಟಾಳ್ ನಾಗರಾಜ್‌ರಂಥ ರಸಿಕರು ಇದ್ದಾಗಲೂ ಏಕೆ ಹೋಗಬೇಕು, ಅವರ ಕುರಿತು ಆದರೂ ಹೇಳಬಹುದಲ್ಲಾ, ನಾವಾದರೂ ಅರಸಿಕರು...

ಶ್ರೀ ವಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರು ಎಷ್ಟು ರಸಿಕರೆಂಬುದು ನಮಗೆ ಗೊತ್ತಿದೆ. ಅವರನ್ನು ರಸಿಕರು ಅಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವರಿಗೆ ರಸಿಕತೆಯಲ್ಲಿ ಅನುಭವವಿದೆ. ಸಮಾಜವಾದಿಗಳೆಲ್ಲಾ ರಸಿಕರೇ, ಅದನ್ನು ತಳ್ಳಿ ಹಾಕುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗ ಜಂಟಿ ಸದನ ಸಮಿತಿ ಮಾಡುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡುತ್ತಾರೆ ? ಜಂಟಿ ಸದನ ಸಮಿತಿ ಮಾಡಲಿಲ್ಲವೆಂದರೆ, there is no alternative. We have to sit there.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಮತ್ತು ಶ್ರೀ ಹೆಚ್. ಎನ್. ನಂಜೇಗೌಡ ಅವರು ಸದನದ ಬಾವಿಗೆ ಆಗಮಿಸಿ ಧರಣಿ ಹೂಡಿದರು. ಹಾಗೂ ಬಿ.ಜೆ.ಪಿ. ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ಮುಗಿಯಿತು. ಪ್ರಸ್ತಾವನೆಯನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ

"8ನೇ ಮಾರ್ಚ್ 1999 ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರುಗಳಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ. "

ಪ್ರಸ್ತಾವವನ್ನು ಅಂಗೀಕರಿಸಲಾಗಿದೆ

ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

3. ಶಾಸನ ರಚನೆ

ವಿಧೇಯಕದ ಮಂಡನೆ ಹಾಗೂ ಅಂಗೀಕಾರ

ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ ವಿಧೇಯಕ, 1999

ಮಂಡನೆಗೆ ಅನುಮತಿ ಕೋರಿಕೆ